130(8)

ESTD: 1919ಸ್ಥಾಪನ

ed No. M. 4648

ಚಂದಾ ದರ
ಸ್ಥಳೀಯರಿಗೆ
4—8—0
ಪರಸ್ಥಳೀಯರಿಗೆ
6—2—0
ಬಿಡಿ ಸಂಚಿಕೆ:
ಮಂಗಳವಾರ 0—1—6
ಶುಕ್ರವಾರ 0—0—6
ಕಾರ್ಯಾಲಯ
ರಥಬೀದಿ, ಮಂಗಳೂರು

ಕಂಠೀರವ

KANNADA KANTEERAVA BI-WEEKLY

ಸಂಪುಟ ೨೮] ಮಂಗಳೂರು, ೧೯೪೭ನೇ ಇಸವಿ ಮಾರ್ಚಿ ತಾ. ೧೮ನೇ ಮಂಗಳವಾರ [ಸಂಚಿಕೆ ೧೦೦
VOL·XXVIII] MANGALORE, TUESDAY MARCH 18, 1947 [NO. 100

Work Executed by Skilled Artists

Oil Paintings
Commercial Drawings
Cinema Slides
Etc. Etc.

Shevgoor Fine Arts
CAR ST. MANGALORE.

ಮದ್ರಾಸ್ ಮಂತ್ರಿಮಂಡಲದಲ್ಲಿ ರಾಜಿನಾಮೆಗೆ ಕಾರಣವೇನು?

"ಸರ್ವತೋಮುಖವಾದ ದ್ರೋಹಾಚರಣೆ"

ಪ್ರಕಾಶಂ ಮಂತ್ರಿಮಂಡಲವು, ಇಷ್ಟರಲ್ಲೇ ಮದ್ರಾಸ್ ಗವರ್ನರರಿಗೆ ತನ್ನ ರಾಜಿನಾಮೆಯನ್ನು ಬರೆದೊಪ್ಪಿಸಿದ ವಾರ್ತೆ ಪ್ರಕಟವಾಗಿದೆ. ಈ ಸಂದರ್ಭದಲ್ಲಿ ಈ ಪ್ರಧಾನರು ತಮ್ಮ "ಪಾರ್ಟಿ" ಯವರನ್ನು ತೃಪ್ತಿಪಡಿಸದೆ ಹೋದರೆಂದೂ; ಎಲ್ಲುಗಳ ವಿಚಾರದಲ್ಲಿ ಅವರ ನಡವಳಿಕೆ ಸರಿಯಾಗಿಲ್ಲ; ಗಾಂಧಿಜಿಯವರು ಇವರಿಗೆ ಖಾದಿ ವಿಚಾರದಲ್ಲಿ ಹೇಳಿದ ಅಭಿಪ್ರಾಯವೇ ಬೇರೆ, ಈ ಪ್ರಧಾನರು ತಮ್ಮ ಅನುಕೂಲಕ್ಕೆ ತಕ್ಕಂತೆ ಮಾಡಿಕೊಂಡ ಅರ್ಥವೇ ಬೇರೆ ಎಂದೂ ಮದ್ರಾಸಿನ "ರಾಷ್ಟ್ರೀಯ ಪತ್ರಿಕೆ"ಗಳೆಂಬ ಒಂದೆರಡು ಪ್ರಮುಖ ದೈನಿಕ ಆಂಗ್ಲ ಭಾಷಾ ಪತ್ರಿಕೆಗಳು, ಏಕಪಕ್ಷದ ತಮ್ಮ ಸಿದ್ಧಾಂತವನ್ನೇ ಮುಂದರಿಸಿ ತನ್ನೂ ಈಕ ಶ್ರೀ ಪ್ರಕಾಶವರ ಮೇಲೆ ಕೆಸರೆರಚಿದ್ದೇ ಸಾಲದ್ದೆ, ಅವರ ಮೇಲೆ ಅವಿಶ್ವಾಸದ ಠರಾವು ತರುವವರ ಕೈಯನ್ನು ಬಲಪಡಿಸುವ ಸಾಹಸವನ್ನೂ ಮಾಡಿದೆ; ಹಾಗಿರುವಲ್ಲಿ, ಶ್ರೀ. ಪ್ರಕಾಶಮರು ನಿಜವಾಗಿಯೂ ಎಷ್ಟು ಮಟ್ಟಿಗೆ ದೂಷಣಾರ್ಹರು ಎಂಬುದನ್ನು ತಿಳಿಯಲಿಕ್ಕಾಗಿ, "ಸ್ವತಂತ್ರ" ಎಂಬ ಆಂಗ್ಲ ಪತ್ರಿಕೆಯೊಂದು ಈಚಿಗೆ ಪ್ರಕಟಿಸಿರುವ ಇದೇ ಕುರಿತಾದ ಅದೊಂದು ಲೇಖನದ ಮುಖ್ಯಾಂಶಗಳನ್ನೂ ಇದರಡಿಯಲ್ಲಿ ಉಲ್ಲೇಖಿಸುವುದು ಅಪ್ರಕೃತವಾಗದು.

"ಸ್ವತಂತ್ರ"ವು "ಸರ್ವತೋಮುಖವಾದ ದ್ರೋಹಾಚರಣೆ" ಎಂಬ ಹೆಸರಿನ ಅಗ್ರ ಲೇಖನವನ್ನು ಪ್ರಕಟಿಸುತ್ತ—ಕೇಂದ್ರ ಸರಕಾರವನ್ನು ನಡೆಯಿಸುತ್ತಿರುವ ಹಾಲಿ ಕಮಾಂಡಿನ ಒಂದು ಭಾಗದವರು, ಪ್ರಧಾನರಾದ ಪ್ರಕಾಶಮರನ್ನು ಹೇಗೆ ಯೋಗ್ಯ ರೀತಿಯಲ್ಲಿ ನಡೆಸಲಿಲ್ಲವೆಂದು ಪ್ರಸ್ತಾವಿಸಿ; ಹಾಲಿ ಕಮಾಂಡಿನವರು, ಕಾಂಗ್ರೆಸ್ ಪ್ರಾಂತಿಕ ಸರಕಾರಗಳನ್ನು ತೊಂದರೆ ಪಡಿಸಬಾರದಾಗಿತ್ತು ಎಂದಿದೆ; ಕಾಂಗ್ರೆಸ್ ಹಾಲಿ ಕಮಾಂಡಿನವರು, ಕಾಂ. ಮದ್ರಾಸ್ ಶಾಸನ ಸಭಾ ಸದಸ್ಯರನ್ನು ಈ ಅವಿಶ್ವಾಸದ ಠರಾವಿಗೆ ಬೆಂಬಲಿಸುವಂತೆ ಸಂಗ್ರಹಿಸುವಂತೆ, ಹಾಗೆ ಶ್ರೀ. ಪ್ರಕಾಶಂ ಅವರು ಉರುಳಿ ಬೀಳುವಂತೆ ಸಡಿಲ ಬಿಟ್ಟರು ಎಂದು ಸಾರಿದೆ; ಕಾಂಗ್ರೆಸ್ ಸಂಸ್ಥೆಯ ಅಖಂಡ ಮುಖಂಡರೇ ಹೀಗೆ, ಕೆಲಸ ಮಾಡುತ್ತಿರುವ ಮಂತ್ರಿಮಂಡಲದ ವಿರುದ್ಧವಾದ ಆಂದೋಲನಕ್ಕೆ ಉತ್ತೇಜನ ಕೊಟ್ಟಿರುವುದರಿಂದ, ಅಧಿಕಾರ ಲಾಲಸೆಯುಳ್ಳ ಆ ಪಾರ್ಟಿಯ ಇತರರು, ತಮ್ಮ ಅದೃಷ್ಟ ಪರೀಕ್ಷೆಗಾಗಿ, ತಮ್ಮ ಸರ್ವ ಶಕ್ತಿ ಸಾಧನಗಳನ್ನೂ ಉಪಯೋಗಿಸಲು ಪ್ರಯತ್ನಿಸಿದರು ಎಂದಿದೆ; ಈ ಆಂದೋಲನದಲ್ಲಿ ಪ್ರಧಾನರ ಕಾರ್ಯನೀತಿಯ ಕುರಿತೇನೂ ಅಸ್ಪಷ್ಟೋಪಗಳಿಲ್ಲ; ಮುಖ್ಯ, ಪಾರ್ಟಿಯ ಕೆಲವರ ಸ್ವಾರ್ಥಸಾಧನೆಗೆ, ಹಾಲಿ ಕಮಾಂಡಿನವರ ಉತ್ತೇಜನ ದೊರಕಿದ್ದೇ ಆ ಅವಿಶ್ವಾಸದ ಠರಾವಿನ ಪ್ರಭಾವಕ್ಕೂ ಪ್ರಕಾಶಕ್ಕೂ ಮುಖ್ಯ ಕಾರಣವಾಗಿದೆ ಎಂದಿದೆ. ಅವಿಶ್ವಾಸದ ಠರಾವಿಗೆ ಪಾರ್ಟಿಯ ಬಹುಮತದ ಬೆಂಬಲ ದೊರೆಯುವ ಮೊದಲೇ, ಹಾಲಿ ಕಮಾಂಡಿನ ಕೆಲ ಪ್ರಮುಖರು ಆ ಠರಾವನ್ನು ಆಶೀರ್ವದಿಸಿದರೆಂದ ಬಳಿಕ, ಆ ಹಾಲಿ ಕಮಾಂಡಿನವರಿಂದ ಯಾವ ನ್ಯಾಯ ದೊರಕೀತೆಂದು ಅರ್ಥವತ್ತಾಗಿ ಅದು ಸೂಚಿಸಿದೆ. ಹಾಲಿ ಕಮಾಂಡ್, ನಿಷ್ಪಕ್ಷಪಾತದ ದೃಷ್ಟಿಯ ನ್ಯಾಯದಾನವನ್ನೇ ಮಾಡುವುದಾಗಿದ್ದರೆ, ಆಗ ಅದು ಪ್ರಕಾಶಮರ ನಾಯಕತ್ವವನ್ನು ಬೇಕೆಂದೇ ಮುಳುಗಿಸ ಹೊರಟ ಕೆಲ ಕಾಂಗ್ರೆಸ್ ಸಭಾ ಸದಸ್ಯರ ಈ ಚಳವಳಿಯನ್ನು ಖಂಡಿಸಿ, ಆ ಪಾರ್ಟಿ ದಂಗೆಯನ್ನು ನಿಲ್ಲಿಸಬೇಕಿತ್ತು; ಪ್ರಧಾನರ ವಿರುದ್ಧವಾದ ಠರಾವಿಗೆ ಅದಷ್ಟು ಹೆಚ್ಚು ಮೆಂಬರರ ದೆಸ್ಯತ್ವಗಳನ್ನು ಒದಗಿಸುವವರಿಗೆ, ಮುಂದೆ ಏನಾದರೂ ಉದ್ಯೋಗ ಸ್ಥಾನಗಳನ್ನು ಒದಗಿಸಿಕೊಡುವೆವೆಂದು ಕೆಲವರು ಮಾಡಿದ ವಾಗ್ದಾನಗಳಿಗೆ, ಹಾಲಿ ಕಮಾಂಡಿನವರು ತಮ್ಮ ಬೆಂಬಲ ವಿಲ್ಲವೆಂದೇ ಪ್ರಕಟಿಸಬೇಕಾಗಿತ್ತು; ಕಾಂಗ್ರೆಸ್ ಚುನಾವಣಾ ಉಸ್ತ್ವೋಜೆಯನ್ನು ತೀರಾ ಮರೆತು, ಕೇವಲ ವೈಯಕ್ತಿಕ ಪ್ರಯೋಜನಕ್ಕಾಗಿಯೇ ತಮ್ಮ ಸ್ಥಾನಮಾನಗಳನ್ನು ಉಪಯೋಗಿಸಿಕೊಳ್ಳಲು ಹೊರಟ ಅಂಥ ಕಾಂಗ್ರೆಸ್ ಶಾಸನ ಸಭಾಸದಸ್ಯರ ಮೇಲೆ ತಕ್ಕ ಕಾರ್ಯಕ್ರಮ ಜರಗಿಸುವ ಹಾಗೆ, (ಪ್ರಧಾನರನ್ನು) ಆ ಪಾರ್ಟಿ ನಾಯಕರನ್ನು ಅವರ ಪಾಡಿಗೇ ಬಿಡಬೇಕಾಗಿತ್ತು ಎಂದಿದೆ.

ಹಾಗೆ ಆ ಪತ್ರಿಕೆ, ಇಂದಿನ ಈ ಪರಿಸ್ಥಿತಿಯ ಆ ಕೆಲ ಕಾರಣಗಳನ್ನು ಕ್ರೋಢೀಕರಿಸಿ ವಿಶದಗೊಳಿಸಿದೆ— ಮೊದಲನೆಯದಾಗಿ ಪ್ರಕಾಶಮರ ವಿರುದ್ಧವಾದ ಆಂದೋಲನಕ್ಕೆ, ಹಾಲಿ ಕಮಾಂಡಿನವರು ಬೆಂಬಲ ಕೊಟ್ಟದ್ದು. ಎರಡನೆಯದಾಗಿ—ಪಾರ್ಟಿ ಶಿಸ್ತು ಕೆಟ್ಟು ಹೋದದ್ದು; ಆಂದರೆ ಶ್ರೀ. ಕಾಮರಾಜ ನಾಡಾರರು, ವೋಟುಗಳನ್ನೂ, ಸಂಸ್ಥಾನ ಸಂಬಂಧದ ಉಪಕರಣಗಳನ್ನೂ ಒದಗಿಸುತ್ತಿದ್ದ ಹಾಗೆ, ಕಾಂಗ್ರೆಸ್ ಶಾಸನ ಸಭಾ ಪಾರ್ಟಿಗೇ ಸೇರದ ಹೊರಗಿನವರು ಹಿಂದಿನಿಂದ ಈ ಎಲ್ಲ ಕೈವಾಡಗಳ ಹಂಚಿಕೆಗಳನ್ನೂ ತಲೆ ಖರ್ಚು ಮಾಡಿ ಸಿದ್ಧಗೊಳಿಸಿ ಕೊಟ್ಟಾಗ, ಆ ನಾಡಾರರ ಕಡೆಯವರು, ತಮ್ಮ ರಾಜಕೀಯ ಅತ್ಯಾಗ್ರಹದ ಆಶಾಪೂರ್ತಿಗಾಗಿ ಆ ಹಂಚಿಕೆ ಹೂಡಿದವರ ಕೈಗೊಂಬೆಗಳಂತೇ ಕುಣಿದಾಡಿದ್ದು! ಅಷ್ಟೇ ಅಲ್ಲ; ಪಾರ್ಟಿಯ ಕೆಲವು ಮಂದಿ, ತಮ್ಮ ಪಾರ್ಟಿಯ ಧರ್ಮ ಮತ್ತು ಹೊಣೆಗಾರಿಕೆಯನ್ನು ಬದಿಗಿಟ್ಟು, ಸಾರ್ವಜನಿಕ ಭಾಷಣಗಳ ಮೂಲಕವೂ, ತಮ್ಮ ಸರಕಾರದ ಅವಮಾನಕ್ಕೇ ಸೊಂಟಕಟ್ಟಿ ಹೊರಟದ್ದು; ತಾವು ಒಂದು ಕಡೆ ಆಳುವ ಪಾರ್ಟಿ ಮೆಂಬರರಾಗಿದ್ದೂ, ಇನ್ನೊಂದು ಕಡೆ ತಮಗೆ, ಯಾವ ರೂಲೂ ಲಗಾವಲ್ಲವೆಂಬಂತೆ ತಾವು ಎದುರು ಪಂಗಡ (Opposition) ಕ್ಕೇ ಸೇರಿದಂತೆ ಇಚ್ಛಾಪ್ರಕಾರ ವರ್ತಿಸಿದ್ದು.

ಇನ್ನು ಮೂರನೆಯದಾದ ಆ ಕಾರಣವು ಎಲ್ಲದಕ್ಕಿಂತಲೂ ಲಜ್ಜಾಸ್ಪದವೆನಿಸಿದೆ;—ಹಾಗೆಂದು ಆ ಪತ್ರಿಕೆಯನ್ನುತ್ತಿದೆ. "ಮಂತ್ರಿಮಂಡಲದ ಮಂತ್ರಿಗಳು, ಪ್ರಧಾನರಲ್ಲಿ ರಾಜನಿಷ್ಠೆಯನ್ನು ತೋರಲಾರದವರಾದರೆ, ಆಗ ಅವರು ಅನುಸರಿಸಬೇಕಾದ ಗೌರವದ ಹಾದಿ ಯಾವುದೆಂದರೆ:—ಅವರು ಆ ಮಂತ್ರಿಮಂಡಲದಿಂದ ಹೊರ ಬಂದು, ಪಾರ್ಟಿ ಎಂಟಿಂಗುಗಳಲ್ಲಿ ತಮ್ಮ ನಾಯಕನನು ಟೀಕಿಸುವುದು! ಆದರೆ ಕೆಲವು ಮಂತ್ರಿಗಳು, ಅತ್ಯನಿಸ್ಪರರ ಸ್ಥಾನದ ಹಕ್ಕು ಬಾಧ್ಯತೆಗಳನ್ನೂ ಅನುಭವಿಸುತ್ತ, ಇತ್ತ ಮೇಲಿಂದ ಮೇಲೆ ಪ್ರಧಾನರ ವಿಚಾರದಲ್ಲಿ ನಿಷ್ಠೆಯನ್ನೂ ತೋರ್ಪಡಿಸುತ್ತ, ಮಧ್ಯದಲ್ಲಿ ಅವರು ಗುಟ್ಟಿನಲ್ಲಿ ಪ್ರಧಾನರ ವಿಚಾರದಲ್ಲಿ, ತೊಂದರೆಗಳನ್ನು ತಂದೊಡ್ಡಿದ್ದೆ, ಪ್ರಧಾನರ ಹಿಂದುಗಡೆ ದ್ರೋಹ ಬುದ್ಧಿಯಿಂದ ಆ ಅವಿಶ್ವಾಸದ ಠರಾವಿಗೆ ತಮ್ಮ ಬೆಂಬಲವನ್ನೂ ನೀಡಿದ್ದಾರೆ. ಹೊಡಲಾದ ತುಂಟತನವನ್ನು ನಿವೃತ್ತಿಗೊಳಿಸಲು ಪ್ರಧಾನರಿಗೆ ಸಮಯ ಸಂದರ್ಭಗಳೇ ದೊರಕದ ಹಾಗೆ, ಈ ಮಂತ್ರಿಗಳು ಈ ಅವಿಶ್ವಾಸದ ಠರಾವು ಬರಲಿದ್ದ ಕೆಲವು ಗಂಟೆಗಳ ಮೊದಲು ಮಾತ್ರವೇ ತಮ್ಮ ರಾಜಿನಾಮೆ ಬರೆದು ಹಾಕಿ, ಪ್ರಧಾನರನ್ನು ಹಾಗೆ ಗಾಬರಿಪಡಿಸುವ "ಪ್ಲಾನ್" ಮಾಡಿದ್ದಾರೆ. ವಸ್ತುತಃ ಯಾವ ಪಾರ್ಟಿ ನಾಯಕರು ಇವರನ್ನು ನಂಬಿ, ರಾಷ್ಟ್ರದ ಜವಾಬುದಾರಿ ಪದವಿಯನ್ನು ಇವರಿಗೆ ಕೊಟ್ಟಿದ್ದರೋ, ಮತ್ತೆ ಯಾವ ನಾಯಕರ ವಿಷಯದಲ್ಲಿ ಈ ಮಂತ್ರಿಗಳು ದ್ರೋಹಾಚರಣೆಯನ್ನೇ ಮಾಡಿದ್ದರೋ, ಆ ತಮ್ಮ ನಾಯಕರ ಧ್ವಂಸದ ಬೂದಿಯ ಮೇಲೆ, ಆ ರಾತ್ರಿಯಾಗುವುದರೊಳಗಾಗಿಯೇ ತಾವು ತಮ್ಮ ಸ್ಥಾನಗಳಲ್ಲಿ ಪುನರ್ ಪ್ರತಿಷ್ಠಿಸಲ್ಪಡುವೆವೆಂದೇ ಈ ಮಂತ್ರಿಗಳು ಭಾವಿಸಿದಂತೆ ತೋರುತ್ತಿದೆ. ಒಟ್ಟು ಈ ಮಂತ್ರಿಗಳು—ಯಾರು ಗೆದ್ದರೂ, ಯಾರು ಸೋತರೂ—ತಾವು ಅಗ್ಗದ ಮಂದಿ ಎಂದು, ಸಂಪೂರ್ಣತೆ ಇಲ್ಲದವರೆಂದು, ನಂಬಲು ಅರ್ಹರಲ್ಲವೆಂದು, ಯಾವ ದೊಡ್ಡ ಸಾರ್ವಜನಿಕ ಕಾರ್ಯಭಾರವನ್ನೂ ಇವರನ್ನು ನಂಬಿ ಇವರಿಗೊಪ್ಪಿಸತಕ್ಕುದಲ್ಲವೆಂದು ಇಂದು ಇವರು ಸಾರ್ವಜನಿಕರ ದೃಷ್ಟಿಯನ್ನು ತಮ್ಮ ಕಡೆಗೆ ಆಕರ್ಷಿಸುತ್ತಿದ್ದಾರೆ. ಇವರು ಪ್ರಧಾನರ ಗೆಳೆಯರಂತೆ ತೋರಿಸಿಕೊಂಡರು; ಶತ್ರುಗಳಂತೇ ವರ್ತಿಸಿದರು; ಅವರು ಮಂತ್ರಿಮಂಡಲವನ್ನು ಬಿಟ್ಟು ಹೋಗಲು ಹೇಳುತ್ತಿರುವ ಆ ನೆವನಗಳೆಲ್ಲ ಯಾರನ್ನೂ ವಂಚಿಸವು."

ಶ್ರೀ. ಪ್ರಕಾಶಮರು ಹೀಗೆ ತಮ್ಮ ಸಹೋದ್ಯೋಗಿಗಳಿಂದ ಅನ್ಯಾಯಕ್ಕೆ ಗುರಿಯಾದರು; ತಮ್ಮ ಪಾರ್ಟಿಯೊಳಗೆ ಹೊರಗಿನವರು ಹಿಂದುಗಡೆಯಿಂದ ಹೂಡಿದ ತಂತ್ರಗಳಿಗೆ ಗುರಿಯಾದರು; ಅಲ್ಲದೆ ಮಧ್ಯೆ ಕಾಲದ ಸರಕಾರದಲ್ಲಿ ವಿರಾಜಮಾನರಾದ ಈ ಕೆಲವು ಮಂದಿ ಹಾಲಿ ಕಮಾಂಡಿನವರ ಆಟದಲ್ಲಿಯೂ ಸಿಕ್ಕು ಬಿದ್ದರು ಎಂದು ಆ ಪತ್ರಿಕೆ ಮುಂಬರಿಯುತ್ತ—ಈ ರಾಜಕೀಯ ಚಟುವಟಿಕೆ ಕಾಂಗ್ರೆಸಿನ ಘನತೆಗೂ ಶಿಸ್ತಿಗೂ ಬಹಳ ಹಾನಿಯನ್ನು ಉಂಟುಮಾಡಿದೆ ಎಂದಿದೆ. "ಮಹಾತ್ಮರು ಕಾಂಗ್ರೆಸನ್ನು ಭೂರಿಜನಸಾಮಾನ್ಯದ ಸಂಸ್ಥೆಯಾಗಿ ಮಾಡಿಟ್ಟಿದ್ದಾರೆ. ಇಡಿಯ ಆಧಿಪತ್ಯದಲ್ಲಿ ಜನತೆ

ಯೂ ಹಲವಾರು ಕಾಂಗ್ರೆಸ್ ಸದಸ್ಯರಿಗಳೂ ಪ್ರಧಾನರಿಗೇ ಅತ್ಯಧಿಕವಾದ ಬೆಂಬಲವನ್ನು ಕೊಟ್ಟಿರುವಾಗ, ಹ್ಯಾ ಕಮಾಂಡಿನವರು ತಮ್ಮ ವರ್ಚಸ್ಸನ್ನು ಪ್ರಕಾಶಮಾನ ಎರುದ್ಧ ಒಳಸಂಚು ಮಾಡಿದವರ ಕಡೆಗೇ ಬೀರುವುದಾದರೆ, ಆಗ ಆ ಕಾಂಗ್ರೆಸ್ ಸಂಸ್ಥೆ ಭೂರಿಜನ ಸಂಸ್ಥೆಯಾಗಿರುವುದು ನಿಂತು, ಆ ಭೂರಿಜನ ಸಂಸ್ಥೆಗೆ ಸಂಬಂಧಿಸಿದ ಬಲವನ್ನೆಲ್ಲ ಕಳೆದುಕೊಳ್ಳುವುದು" ಎಂದು ಎಚ್ಚರಿಸಿದೆ.

—

In the Court of the District Judge of South Kanara

O. P. No. 22 of 1947.

In the matter of Bhagirathi female, Shivalli Brahmin, Hindu —minor.

The Collector of South Kanara Mangalore, S. K. — Petitioner.

To

The near relative of the minor: Vasudeva mayya (maternal uncle of the minor Bhagirathi female (minor) who was working in the Coffee hotel in Bangalore now residing in Kuloor.

And to all whom it may concern.

Take notice that, on the 22nd day of February 1947 the abovenamed Petitioner the Collector of South Kanara District has presented an application to this Court praying that the said K. N. Ghunudu Bhatta, son of Rama Bhatta may be appointed the guardian of the person and property of the abovenamed minor and for other reliefs, and that the 1st day of April 1947 has been fixed for the hearing of the application at 11 a. m. and that if you desire to oppose the said application, or to apply for the appointment of any person other than the said Petitioner abovenamed as guardian of the person and property of the said minor, you must appear on the abovesaid day in this Court, in person, or by a duly authorised pleader, and be prepared to adduce any documentary and oral evidence upon which you rely, and that in default of your appearance the said application may be heard and determined in your absence. Any relation or friend of the said minor may appear and be heard upon the said application, and may inspect and obtain a copy of the petition; and it is not necessary to present any petition for this purpose.

(Sd.)

Rao Saheb M. K. Nambiar,

Government Pleader.

——

ಕುಂಟ.... ಪಂತಿ

(ಪಬ್ಲಿಕ್ ನ್ಯೂಯಿಸೆನ್ಸ್ ಇಲಾಖೆಯ ಪ್ರಕಟಣೆ)

ಅಲ್ಲ—ನಮ್ಮ "ಮದ—ರಾಶಿ"ಯ (ಯಾ "ಮ್ಯಾಡ್'—ರ್ಯಾಷ್"ನ) ಯಾ ಮದ್ರಾಸಿನ ಕೆಲವು ಕಾಂಗ್ರೆಸ್ ಶಾಸನ ಸಭಾ ಸದಸ್ಯರೇನು ಕಡಿಮೆಯವರೇ? "ಚಿಲ್ಲರೆ"ಯವರೇ? ನಮ್ಮ ಇಡಿಯ ಮಂತ್ರಿಮಂಡಲವನ್ನೇ ಕ್ಷಣಾರ್ಧದಲ್ಲಿ ಪಾತಾಳಕ್ಕೊತ್ತಿ ಬಿಟ್ಟ ಮೆಸರ್ಸ್ ವಾಮನ ಮೂರ್ತಿ ಎಂಡ್ ಕಂಪೆನಿಯ "ನಟ ಶಿರೋಮಣಿ"ಗಳಲ್ಲವೇ?

ಮುಂದಿನ ಮಂತ್ರಿಮಂಡಲದೊಳಗೆ ಯಾವ "ಮಜಬೂತು ಮಾವಂದಿರು" ಒಂಟಿಯಾಕನ್ನಗಳ್ಳ'ರ ವೇಷದಲ್ಲಿ ನುಸುಳುವರೋ! ಅವರಾಗಲೇ ಏನೇನು ಸ್ಥಾನಮಾನಗಳ ವಾಗ್ದಾನಗಳನ್ನು ಯಾವ್ಯಾವ ಮನೆ ಹಾಳು ಅಳಿಯಂದಿರಿಗೆ ಮಾಡಿರುವರೋ! ಈ ಅಳಿಯಂದಿರಲ್ಲಿ ಬುಧನ ದೆಸೆ ಯಾರಿಗೋ, ಕೋ—ದಂಡರಾಹುವಿನ ಭುಕ್ತಿ ಯಾರಿಗೋ, ಈಶ್ವರನಿಗಾದರೂ ಗೊತ್ತೆ? ಸ್ವಾಎ!

ಮುಂದಿನ ಮಂತ್ರಿಮಂಡಲದಲ್ಲಿ—ತಮಿಳರ ದಂಡು ಹೆಚ್ಚಾದರೆ,—ಹೊಟ್ಟುಗಳಿಗೆ ದೋಸೆ ಇಡ್ಲಿ ಬಗ್ಗೆ ಅಕ್ಕಿ ಪಡಿ ಹೆಚ್ಚಬಹುದು.

ತೆಲುಗರ ದಂಡು ಹೆಚ್ಚಾದರೆ ವೆಣಸಿನ ಪುಡಿಗೂ ತುಪ್ಪಕ್ಕೂ ಬೆಲೆ ಏರಬಹುದು.

ಮಲೆಯಾಳಿಗಳ ದಂಡು ಹೆಚ್ಚಾದರೆ "ಮೋರ್ ಕೊಳಂಬ"ನ (ಕಾಯಿ ಹುಳಿ) ನಿತ್ಯ ಸಂತರ್ಪಣೆಯಾಗಬಹುದು.

ಆದರೆ (ದಕ್ಷಿಣ) ಕನ್ನಡದವರಿಗೆ ಏನು ಸಿಕ್ಕಿದರೂ ಅವರಿಗೆ ದಾಕ್ಷಿಣ್ಯ ಶ್ರಾದ್ಧದ ಸಂಕಲ್ಪ ಮಂತ್ರವೇ ಗಟ್ಟಿ!

ಇನ್ನು ಬೀದಿಯಲ್ಲಿ ಹೊರಳುವವರಿಗೂ "ಖಾದಿ" ಭಯವಿಲ್ಲವಯ್ಯಾ!

(ಗೋಣಿ ಚೀಲದಂಥ) ಆ ದರಗು ಖಾದಿಯನ್ನು ಮುದುಕ ಗಾಂಧಿಯವರೊಬ್ಬರೇ ಧರಿಸಿದರೂ ಇಡೀ ಹಿಂದುಸ್ಥಾನ ಧರಿಸಿದಂತಾಗದೇ? ನಾಜೂಕು ನಾಗರಿಕತನದ ಪ್ರಕಾಶದಲ್ಲಿ ಜಗಜಗಿಸುತ್ತಿರುವ ನಮಗೂ, ನಿಮಗೂ, ಕೆಲವು ಆ ಕಾಂಗ್ರೆಸ್ ಎಂ. ಎಲ್. ಎ. ಗಳಿಗೂ ಆ ಸುಡುಗಾಡು ಖಾದಿ ಏಕೆ ಸ್ವಾಎಂ?

"ಖಾದಿ ಪ್ರಚಾರ; ಅಂದರೆ ಅದೊಂದು "ತತ್ವ", "ಆದರ್ಶ," "ಏಧಾಯಕ ಕಾರ್ಯಕ್ರಮ" ಮಾತ್ರವಲ್ಲವೆ? ಅದು ಕಾಗದದ ಶೃಂಗಾರಕ್ಕೆ ಮಾತ್ರವಲ್ಲವೆ? "ಖಾದಿ ಪ್ರಚಾರ"ಕ್ಕೆ ಹೊರಟು, "ಎಲ್ಲು"ಗಳ ಕತ್ತು ಹಿಸುಕಿದರೆ, ಜೆಟ್ಟಯ್ಯಾರರು ಬಟ್ಟಾರೇ? ರೆಡ್ಡಿಯಾರರು, ನಾದಾರರು, ಮೊದಲಿಯಾರರು (ಇದುವರೆಗೆ ಕೋಟಗಟ್ಟಲೆ ದುಡ್ಡು ಹೊಡೆದು ಹಾಕಿದ) ಇತರರೂ ಸುಮ್ಮನೆ ಕೂತಾರೇ? ಅಷ್ಟೇಕೆ ಸ್ವಾಎಂ? ನಮ್ಮ ಕೆಲವು ಕಾಂಗ್ರೆಸ್ ಯಮ. ಯಲ. ಏ ಗಳವರ "ರಾಜೇವಾಸ"ದಲ್ಲೇ "ಮಿಲ್ ಬಟ್ಟೆ"ಗಾಗಿ ದೊಡ್ಡ ಭೂಕಂಪವಾಗಿ ಅದರಲ್ಲಿ ಅವರ ಪ್ರಾಣಗಳೇ ಅಡಿಮೇಲಾಗವೆ?

ಒಂದು ಕಣ್ಣಿನಿಂದ ನೋಡಿದರೆ —ಕೆಲ ನಮ್ಮ ಕಾಂ॥ ಯಮ....ಏಗಳು ಇಷ್ಟು ದಿನ ಅಷ್ಟು ಸಂಬಳ ಭತ್ತೆ ತಿಂದು ತೇಗಿದ್ದು ಸಾರ್ಥಕವಾದ ಹಾಗೇ ತೋರುತ್ತದೆ; ಇನ್ನೊಂದು ಕಣ್ಣಿನಿಂದ ನೋಡಿದರೆ, ಏನೂ ಕೈಲಾಗದವನು ಕೊನೆಗೆ ಮನೆ ಮುದುಕಿ ಸೊಂಟವನ್ನೇ ಮುರಿದು ಎಸೆ ಹುರಿ ಮಾಡಿದ ಹಾಗೇ ಕಂಡು ಬರುತ್ತಿದೆ.

ಅಲ್ಲ – ಈ ಕೆಲ ಕಾಂ॥ ಯಮ....ಏಗಳು ತಮ್ಮ ವೈಯಕ್ತಿಕ ಯಾ ತಮ್ಮ ಗುಂಪಿನ ಲಾಭಕ್ಕಾಗಿ ಆಗಾಗ "ಕ್ಯಾಬಿನೆಟ್ ಮೇಕರ್ಸ್" (ಅಂದರೆ ಮರದ ಕಬಾಟು ಮಾಡುವ ಬಡಗಿಗಳು ಎಂಬ ಅರ್ಥವಲ್ಲ; ಮಂತ್ರಿಮಂಡಲಗಳನ್ನು ಸೃಷ್ಟಿಸುವ ನವ ಬ್ರಹ್ಮರು ಎಂಬುದೇ ಅರ್ಥ) ನ ಪಾತ್ರ ವಹಿಸಿ ಹಾಗೆ ಅವನ್ನು ರಚಿಸಲಿಕ್ಕೂ; ಅವು ಅವರಿಗೆ ಬೇಡವಾದಾಗ ಅವನ್ನು ಅರ್ಜಂಟಾಗಿ

(ಒನೇ ಪುಟ ನೋಡಿ)



— ಪಂಜಾಬಿನ ಪಾಕಿಸ್ತಾನ ಪ್ರಲಾಪ —

— ಮದ್ರಾಸ್ ಮಂತ್ರಿ ಮಂಡಲ —

— ಢಿಲ್ಲಿಯ ಚಟುವಟಿಕೆಗಳು —

— ರಷ್ಯ ಅಮೇರಿಕಗಳ ತಿಕ್ಕಾಟ —

ಕಳೆದ ೧೯೪೬ನೇ ವರ್ಷದ ಮಾರ್ಚಿ ತಿಂಗಳಲ್ಲಿ ಬ್ರಿಟಿಷ್ ಸಚಿವರು ಹಿಂದುಸ್ಥಾನಕ್ಕೆ ಬಂದು, ಹಿಂದೀ ಸ್ವಾತಂತ್ರ್ಯವನ್ನು ಸಿದ್ಧಿಸಿಕೊಳ್ಳುವ ಬಗ್ಗೆ ಹಿಂದೀಯರಿಗೆ ದಾರಿಯೊಂದನ್ನು ತೋರಿಸಿ ಕೊಟ್ಟು, ಇಂಗ್ಲಾಂಡಿಗೆ ಮರಳಿದ ಬಳಿಕ ಹಿಂದೀಯರಲ್ಲಿ ಆ ತನಕ ಬ್ರಿಟಿಷರ ಎರೋಧವಾಗಿ ಕಂಡು ಬರುತ್ತಿದ್ದ ಒಕ್ಕಟ್ಟಿನ ಉತ್ಸಾಹವು ಮಾಯವಾಗಿ ಹೋಯಿತು. ಆ ತನಕ ಬ್ರಿಟಿಷರ ಸಹಾಯದಿಂದ ತಾವು ಪಾಕಿಸ್ತಾನವನ್ನು ಸುಲಭದಲ್ಲಿ ಸಂಪಾದಿಸುವೆವೆಂದು ಆಶಿಸುತ್ತಿದ್ದ ಮುಸ್ಲಿಂ ಲೀಗಿನ ಮುಖಂಡರು ನಿರಾಶೆ ಹೊಂದಿ ನಿರಾಶೆಯ ಕ್ರೋಧದಿಂದ ಹಿಂಸಾತ್ಮಕ ಚಳವಳಿಯ ಪ್ರಚಾರವನ್ನು ನಡೆಸತೊಡಗಿದರು. ಆಗೋಸ್ತು ೧೬ನೇ ದಿನ ಅವರು ಕಲ್ಕತ್ತದಲ್ಲಿ ಈಗಿನ ಹಿಂದೂ ಮುಸ್ಲಿಮ್ ಭ್ರಾತೃ ಯುದ್ಧಕ್ಕೆ ಪೀಠಿಕೆಯನ್ನು ಪ್ರಾರಂಭಿಸಿದರು. ಇದರ ಬಳಿಕ ಕೇಂದ್ರದಲ್ಲಿ ಪ್ರಜಾಸಮ್ಮತ ತಾತ್ಕಾಲಿಕ ಸರಕಾರವು ಸ್ಥಾಪನೆಯಾದರೂ ಆ ಭ್ರಾತೃ ಯುದ್ಧವು ಈಗಲೂ ನಡೆಯುತ್ತಲೇ ಇದೆ. ಕಲ್ಕತ್ತ ನೊವಾಖಾಲಿ, ಬಿಹಾರು, ಎಂಬತ್ತುಗಳಲ್ಲಿ ಸಾವಿರಾರು ಜನರು ಆಹುತಿಯಾಗಿ ಕೋಟ್ಯಾನುಕೋಟಿ ರೂಪಾಯಿ ಬಾಳುವ ಸೊತ್ತುಗಳು ಯಾರಿಗೂ ಪ್ರಯೋಜನವಿಲ್ಲದಂತೆ ನಾಶವಾಗಿ ಹೋದುವಾದರೂ ಲೀಗಿನ ವಿಚಾರಗಳಲ್ಲೇನೂ ಈ ತನಕ ವ್ಯತ್ಯಾಸವಾಗಲಿಲ್ಲ. ಕಳೆದ ಫೆಬ್ರವರಿ ೨೦ನೇ ದಿನ ಬ್ರಿಟಿಷ್ ಪ್ರಧಾನ ಸಚಿವರಾದ ಆಟ್ಲಿಯವರು ೧೯೪೮ನೇ ಜೂನಿನಲ್ಲಿ ಬ್ರಿಟಿಷರು ತಮ್ಮ ಎಲ್ಲಾ ಅಧಿಕಾರಗಳನ್ನು ಹಿಂದೀಯರಿಗೆ ಬಿಟ್ಟುಕೊಡುವ ನಿಶ್ಚಯವನ್ನು ಸಾರಿದೊಡನೆ ತಮ್ಮ ಪಾಕಿಸ್ತಾನ ಪ್ರಾಂತ್ಯಗಳಲ್ಲಿ ಹೇಗಾದರೂ ತಮ್ಮ ಪಕ್ಷದ ಮಂತ್ರಿಮಂಡಲಗಳೇ ಇನ್ನೂ ಅಧಿಕಾರದಲ್ಲಿರಬೇಕೆಂದು ಲೀಗಿನ ಪ್ರಯತ್ನಗಳು ಇಮ್ಮಡಿ ಬಲದಿಂದ ಪ್ರಾರಂಭವಾದುವು; ವಾಯುವ್ಯ ಗಡಿಯಲ್ಲಿ ತಮ್ಮ ಪಾಕಿಸ್ತಾನವನ್ನು ಸ್ಥಾಪಿಸಬೇಕೆಂದು ಲೀಗಿನವರು ಹೇಳುವ ನಾಲ್ಕು ಪ್ರಾಂತ್ಯಗಳಲ್ಲಿ ಮುಸ್ಲಿಂ ಸಂಖ್ಯೆಯು ಈಗ ಹೀಗಿದೆ:—

	ಮುಸ್ಲಿಮರು	ಮುಸ್ಲಿಮೇತರರು
(೧) ಪಂಜಾಬು	೧೬,೨೧೭,೨೪೨	೧೨,೨೦೧,೫೭೭
(೨) ಗಡಿನಾಡು ಪ್ರಾಂತ್ಯ	೨,೭೪೮,೭೯೭	೨೪೯,೨೭೦
(೩) ಸಿಂಧು	೩,೨೦೮,೩೨೫	೧೩೨೬,೬೮೩
(೪) ಬ್ರಿಟಿಷ್ ಬಲೂಚಿಸ್ತಾನ	೪೩೮,೯೩೦	೬೨,೭೦೧
	೨೨,೬೫೩,೭೪೪	೧೩,೭೪೪,೭೩೧

ಆ ನಾಲ್ಕು ಪ್ರಾಂತ್ಯಗಳಲ್ಲಿ ಮುಸ್ಲಿಂ ಸಂಖ್ಯೆಯು ಒಟ್ಟಾರೆ ನೂರರಲ್ಲಿ ೬೨ರಂತಿದ್ದರೂ ಗಡಿನಾಡು ಪ್ರಾಂತ್ಯದಲ್ಲಿ ಕಾಂಗ್ರೆಸು ಪಕ್ಷದ ಪಠಾಣ ಮಂತ್ರಿಮಂಡಲವೂ ಪಂಜಾಬಿನಲ್ಲಿ ಸಂಯುಕ್ತ ಪಕ್ಷಗಳ ಮಂತ್ರಿಮಂಡಲವೂ ಅಧಿಕಾರದಲ್ಲಿದ್ದು ಲೀಗಿನ ಪ್ರತಾಪಕ್ಕೆ ಎಡೆ ಸಿಕ್ಕಿರುವುದಿಲ್ಲ; ವಾಯವ್ಯ ಪಾಕಿಸ್ತಾನದ ಪ್ರಧಾನ ಪ್ರಾಂತವಾದ ಪಂಜಾಬಿನ ೨೮,೪೧,೬೯೮ ಜನರಲ್ಲಿ ೧೬,೨೧೭,೨೪೨ ಮುಸ್ಲಿಮರಿದ್ದರೂ ಅಲ್ಲಿ ಕಾಂಗ್ರೆಸಿನ ಸಹಕಾರವಿದ್ದ ಯುನಿಯನಿಸ್ಟ್ ಮಂತ್ರಿಮಂಡಲವು ಮೊನ್ನೆ ತನಕ ಅಧಿಕಾರದಲ್ಲಿದ್ದು ಲೀಗಿಗೆ ತುಂಬಾ ಕ್ರೋಧ ಬೇಸರಗಳಿಗೆ ಕಾರಣವಾಗಿತ್ತು. ಪಂಜಾಬಿನ ಮುಸ್ಲಿಮೇತರರಲ್ಲಿ ಹಿಂದುಗಳು ೬,೮೯೪,೦೫೭— ಸಿಕ್ಖರು ಬರೇ ೩,೭೫೭,೪೦೧ ಮಾತ್ರವಿದ್ದರೂ ಐತಿಹಾಸಿಕ ಮತ್ತು ಆರ್ಥಿಕ ದೃಷ್ಟಿಯಿಂದ ಸಿಕ್ಖರು ಆ ಇಡೀ ಪ್ರಾಂತ್ಯದಲ್ಲಿ ಪ್ರಮುಖರಾಗಿದ್ದಾರೆ; ಪಂಜಾಬಿನಲ್ಲಿಲೀಗೇ ಸರ್ವರಾಜ್ಯಾಧಿಕಾರವನ್ನು ನಡೆಸುವುದಕ್ಕೆ ಸಿಕ್ಖರೇ ಮುಖ್ಯ ಎರೋಧಿಗಳಾಗಿದ್ದು ಹಿಂದುಗಳು ಅಲ್ಲಿ ಸಿಕ್ಖರೊಡನೆ ನಿಜಬಾಂಧವ್ಯದಲ್ಲಿರುವುದರಿಂದ ಲೀಗಿಗೆ ತನ್ನ ಕಾರ್ಯಸಾಧನೆಗೆ ಇತರ ದಾರಿ ಯಾವುದೂ ದೊರಕದೆ ಕೊನೆಗೆ ಮುಷ್ಟಿ ಬಲದಿಂದ ಪಾಕಿಸ್ತಾನವನ್ನು ಸ್ಥಾಪಿಸುವ ಘೋರಣವನ್ನು ಕೈಕೊಂಡಿತು; ಪ್ರಯತ್ನದಲ್ಲಿ ಅದರ ಬಳಿಕ ಪ್ರಾರಂಭವಾದ ಲೀಗಿನ ಚಟುವಟಿಕೆಗಳಿಂದ ಯುನಿಯನಿಸ್ಟ್ ಮಂತ್ರಿಮಂಡಲವು ಬೇಸರಿಸಿ, ಕಂಗೆಟ್ಟುಕೊನೆಗೆ ತನ್ನ ರಾಜಿನಾಮೆಯನ್ನು ಕೊಟ್ಟಿತು. ಆ ರಾಜಿನಾಮೆಯ ಬಳಿಕ ಅಲ್ಲಿ ಲೀಗಿನ ಮಂತ್ರಿಮಂಡಲವು ರಚನೆಯಾಗುತ್ತಿರುವಷ್ಟರಲ್ಲಿ ಈಗಿನ ಘೋರ ರಕ್ತಪಾತದ ಕದನವು ಪ್ರಾರಂಭವಾಗಿ, ಇಷ್ಟರಲ್ಲಿಯೇ ಸಾವಿರಾರು ಜನರು ಆಹುತಿಯಾಗಿ, ಅನೇಕ ಕೋಟಿ ರೂಪಾಯಿ ಬಾಳುವ ಸೊತ್ತೂ ನಷ್ಟವಾಗಿರುತ್ತದೆ. ಇಕ್ಕಡೆಯವರೂ ಇನ್ನೂ ಬಲಾಬಲ ಪರೀಕ್ಷೆಯಲ್ಲಿದ್ದಾರಾದರಿಂದ ಬೇಗನೇ ಶಾಂತಿಸ್ಥಾಪನೆಯಾಗುವಂತಿಲ್ಲ. ಈಗ ನಡೆಯುತ್ತಿರುವ ಈ ಭ್ರಾತೃ ಯುದ್ಧವು ಮುಸ್ಲಿಮ್ ಪ್ರಾಧಾನ್ಯದ ಪಶ್ಚಿಮ ಪಂಜಾಬಿನಲ್ಲಿಯೇ ಬಲವಾಗಿದೆ. ಅದು ಲಾಹೊರಿನಲ್ಲಿ ಪ್ರಾರಂಭವಾಗಿ ಅಮೃತಸಾರಿನಲ್ಲಿ ಭೀಕರ ರೂಪವನ್ನು ತಾಳಿ ಮುಲ್ತಾನ್, ರಾವಲಪಿಂಡಿ, ಕೆಂಪಬೆಲ್ಲಪುರಗಳಿಗೆ ಹಬ್ಬಿ, ಈಗಲೂ ಪಶ್ಚಿಮ ಪಂಜಾಬಿನ ಹಳ್ಳಿಗಳಲ್ಲಿ ಪ್ರಬಲವಾಗಿದೆ. ಕಾಶ್ಮೀರು, ಗಡಿನಾಡು ಪ್ರಾಂತ್ಯ, ಆಜಾದ್ ಇಲಾಖೆಗಳು ಪಂಜಾಬಿಗೆ ಕೂಡುವಲ್ಲಿ ಹಿಂದುಗಳೂ ಸಿಕ್ಖರು ಅಲ್ಪ ಸಂಖ್ಯಾತರಾಗಿದ್ದು,

(೬ನೇ ಪುಟ ನೋಡಿ)

In the Court of the District Judge of South Kanara

O. P. No. 31/1947.

In the matter of minor Devaki.—

Between:—

Padmavathiamma ...Petitioner.

and

1. Nagamma, 2. Venkatramana Bhatta—Respondents.

Notice is hereby given that the petitioner has filed the above application under the Guardians and Wards Act praying that she may be appointed guardian of the person and the properties of the minor Devaki daughter of Ananthakrishna Bhatta of Mogru village Puttur Taluq and the 16th day of April 1947 has been fixed for the hearing of the said application.

Persons interested in opposing the said application should appear in court either in person or by pleader on the above said date, failing which the said application will be heard in their absence

SHRIDHARA RAO P.
Advocate for Petitioner.

Mangalore, 10-3-1947.

NOTICE

In the Court of the District Munsiff of Mangalore

S. C. No. 23 of 1947.

Between:—

B. F. Lobo — Plaintiff

and

Mama Beary — Defendant.

To

Defendant Mama Beary son of Iddine Beary residing at Mudashedde village, Mangalore Taluk.

Take notice that, the above named plaintiff has filed the above suit for recovery of Rs. 352—8—6 being the principal and interest due under a pronote with further interest and all costs of suit against you and the same is posted to 28—3—1947. Take notice that if you fail to appear in person or by a pleader duly instructed on the said date the suit will be heard and determined in your absence.

(By order of Court)

B. ANANTH RAO,
Advocate for plaintiff.

Mangalore, 11—3—1947.

Making West End Watches for You



ನಿಮಗಾಗಿ ವೆಸ್ಟ್ ಎಂಡ್ ವಾಚ್ ತಯಾರಿ

ತೂಕದ ಚಕ್ರ. ವಾಚಿನ ಚಲನೆಗೆ ಅಗತ್ಯವಾವ ಹಲವಾರು ಯಂತ್ರಭಾಗಗಳಲ್ಲಿ ತೂಕದ ಚಕ್ರ ಮುಖ್ಯ. ಇಲ್ಲಿ ಕಾಣುವ ಚಿತ್ರದಿಂದ ಶಾಸ್ತ್ರೀಯ ರೀತಿಯ ಆ ಚಕ್ರದ ತಯಾರಿಯಲ್ಲಿ ಪ್ರವೀಣತೆಯ ಶಿಲ್ಪ ಚಾತುರ್ಯ ಅಗತ್ಯವೆಂದು ವೇದ್ಯ.

ನ್ಯೂ ಕೆಲಿಬರ್ "ಇ"

ನಿಕ್ಕೆಲ್ ಬೆಳ್ಳಿ, ಸದಾ ಶುಭ್ರ ಉಕ್ಕಿನ ಹಿಂಬದಿಯೊಡನೆ ರೂ. 79.

ವೆಸ್ಟ್ ಎಂಡ್ ವಾಚ್ ಕೊ.
ಬೊಂಬಯಿ ಮತ್ತು ಕಲ್ಕತ್ತ.

ತೂಕದ ಚಕ್ರ ಮೈನ್ ಸ್ಪ್ರಿಂಗಿನಿಂದ ಶಕ್ತಿ ಪಡೆದು ಸಮಯ ಸೂಚಕವಾಗುತ್ತದೆ. "ವೆಸ್ಟ್ ಎಂಡ್" ವಾಚುಗಳ ತೂಕದ ಚಕ್ರದ ಕಾರ್ಯ ಸಮಂಜಸ. ಒಳ್ಳೆ ವಾಚಿನಿಂದ ಆ ನ. 'ವೆಸ್ಟ್ ಎಂಡ್'ನ್ನೇ ಕೊಳ್ಳಿ.

ಜಾಹಿರಾತು ಮಾಡಿದ ಎಲ್ಲ ನಮೂನೆ ವಾಚುಗಳನ್ನು ಒದಗಿಸಲಾಗದಿದ್ದರೂ ಸ್ಟಾಕಿನಲ್ಲಿರುವ ಮಟ್ಟಿಗೆ ಆರ್ಡರ್‌ಗಳನ್ನು ಪೂರೈಸುವ ಪ್ರಯತ್ನವಿದೆ.

WEST END WATCH CO.
BOMBAY CALCUTTA

ಪಂಡಿತ್ ಬೇಂಕ್
ಮಂಗಳೂರು

ಈ ಬೇಂಕಿನ ಶಾಖೆಯನ್ನು ಈ ಶಹರಿನ ಮಾರ್ಕೆಟ್ ರೋಡಿನಲ್ಲಿ ಎಮ್. ಎಮ್. ಶಾನುಭೋಗರ (ಮನ್ನಾ ಶೋಸ್) ಎದುರುಗಡೆಯ ಕಟ್ಟೋಣದಲ್ಲಿ ತಾರೀಕು 30-9-1946ನೇ ಸೋಮವಾರ ದಿವಸ ಬೆಳಿಗ್ಗೆ 10 ಘಂಟೆಗೆ ತೆರೆಯಲಾಗಿದೆ. ಚಿನ್ನಾಭರಣ ಈಡಿನ ಮೇಲೆ ಹಣವನ್ನು ಕೊಡುವುದು ಈ ಬೇಂಕಿನ ವಿಶೇಷ ಗುಣ (speciality).

Pandit Shiva Rao, B. A., LL. B.
Sole Proprietor
U. P. Rao,
Branch Agent.

ಗುರಲಿಗ ಉಪಾಯ ಈಗ ಸಿಕ್ಕಿದೆ

ಪುರೋಹಿತ ಶ್ವಾಸಹಾರಿಯು ಆ ತರಗತಿಯಲ್ಲಿ ಅದೊಂದೇ ಔಷಧ ಮಾತ್ರವಾಗಿದ್ದು, ಆದು ಸೇವಿಸಲ್ಪಡಲಾರಂಭಿಸಿದಾಗ ಕಫ ಸಡಲುತ್ತದೆ, ಉಸಿರುಗಟ್ಟುವಿಕೆ ಕಡಿಮೆಯಾಗುತ್ತದೆ, ಮಲಬದ್ಧತೆ ಸರಿಯಾಗುತ್ತದೆ, ಜೀರ್ಣ ಶಕ್ತಿ ಹೆಚ್ಚುತ್ತದೆಯಲ್ಲದೆ ಕ್ರಮಶಃ ತ್ರಾಣ ತಿರುಗಿ ಉಂಟಾದ ಮೇಲೆ ಶ್ವಾಸಕೋಶಗಳು ಬಲಗೊಂಡು ಉಬ್ಬಸವು ಇನ್ನೆಂದಿಗೂ ಇಲ್ಲದಂತೆ ನಿಮ್ಮನ್ನು ಸಂಪೂರ್ಣವಾಗಿಯೂ ಬಿಟ್ಟು ತೊಲಗುತ್ತದೆ.

ಶ್ವಾಸಹಾರಿ ಪ್ಲೈನ್ (ಬ್ಲು ಪೇಕಿಂಗ್) ಉಬ್ಬಸ, ಉಸಿರುಗಟ್ಟುವಿಕೆ, ಬೆಳಗಿನ ಕೆಳ್ಮು, ಕಠಿನವಾದ ಶ್ವಾಸನಳಿಗೆ ರೋಗ—ಇವನ್ನು ಗುಣಪಡಿಸುತ್ತದೆ. ಮಲಬದ್ಧತೆಯುಳ್ಳವರಿಗೆ ಮತ್ತು ಪಿತ್ತಪ್ರಕೃತಿಯ ಆಮ್ಲತೆಯುಳ್ಳವರಿಗೆ **ಶ್ವಾಸಹಾರಿ ಕಂಪೌಂಡ್** (ರೆಡ್ ಪೇಕಿಂಗ್) ರಾವುಬಾಣ ಔಷಧದಂತೆ ಅಧಿಕ ಉಪಯುಕ್ತವಾಗಿದೆ; 3, 6, 12 ಔನ್ಸುಗಳಲ್ಲಿ ಅನುಕ್ರಮವಾಗಿ ರೂ. 3—6—0, 5—12—0 ಮತ್ತು 10—0—0 ರಂತೆ ಎಲ್ಲ ಕೆಮಿಸ್ಟರಲ್ಲಿ ದೊರಕುತ್ತದೆ.

ಗುರಲನ್ನು ಮತ್ತು ಶ್ವಾಸಕೋಶ ಕಾಯಿಲೆಗಳನ್ನು ಗುಣಪಡಿಸಲು ಇದೊಂದೇ ವೈದ್ಯರ ಔಷಧ

ಪುರೋಹಿತ ಶ್ವಾಸಹಾರೀ
DR. PUROHIT PHARMACY, KOLHAPUR

ಎಚ್ಚರಿಕೆ

ಹಲವಂಗಗಳಿಂದ ಕಟ್ಟಾಗಿದ್ದರೂ, ಯಾ ಇನ್ನಾವ ಕಾರಣವಿದ್ದರೂ — 'ಕುಮಾರಿ' (Govt. Regd.) ನಿಶ್ಚಿತ ನಿರುಪದ್ರವಿ. ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಘಂಟೆಗಳಲ್ಲಿ ಹರಿಯುವುದು. ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು! ಸಾವಿರಾರು ಮಂದಿ ತೃಪ್ತರಾಗಿದ್ದಾರೆ!! ಬೆಲೆ ರೂ. 3/-. ದೀರ್ಘಕಾಲದ ಮತ್ತು ಕಠಿಣತರ ಸಂದರ್ಭಗಳಿಗೆ ವಿಶೇಷ ತಯಾರಿ. ರೂ. 5/-. ಪ್ರತಿ 6 ತಿಂಗಳ ಸಂತತಿ ಪ್ರತಿಬಂಧಕಕ್ಕೆ ರೂ. 4/-. (ವಿ. ಪಿ. 12 ಆಣೆ ಹೆಚ್ಚಿಗೆ.) Mrs. P. Devee F. D. S. (K)
Tollygunge, Calcutta.
ಸ್ವಾಕಿಸ್ಟರು:-ಷಾಕಂಪೆನಿ, ಮಂಗಳೂರು.

THE CANARA BANKING CORPORATION LIMITED.
(Incorporated in British India with limited liability)
ESTD: 1906.
Head Office:-UDIPI, S. India.

CAPITAL:	Rs.
Authorised	25,00,000
Issued, subscribed & called up	16,00,000
Paid up	15 97,145
RESERVES	5,25,000
DEPOSITS	2,07,47,928
TOTAL RESOURCES	3,00,01,186

With a net work of branches & Agencies in all principal cities of India, we shall be able to render efficient collection services.
Banking Business of Every Description Transacted.

XXVIII] ಮಂಗಳೂರು ತಾರೀಕು ೧೮—೩—೧೯೪೭ [೧೦೦
೧೮೬೯ ವ್ಯಯ ಸಂವತ್ಸರದ ಫಾಲ್ಗುಣ ಬ| ೧೧ ಮಂಗಳವಾರ

ಪಂಜಾಬಿನ ದುರಂತ

ಮೊದಲು ಬಂಗಾಳ; ಅನಂತರ ಬಿಹಾರ; ಈಗ ಪಂಜಾಬ್! ಎದೆಯೊಡೆಯುವ ರಾಕ್ಷಸ ಕೃತ್ಯಗಳು ಈಗಲೂ ಪಂಜಾಬಿನಲ್ಲಿ ನಡೆಯುವುದು ನಿಂತಿಲ್ಲ. ಪಂಜಾಬಿನ ಕೆಲ ಘಟನೆಗಳು ನೌಖಾಲಿಯನ್ನು ಎೂರಿಸಿದುವೆಂದು ಕೆಲ ಮುಂದಾಳುಗಳು ಅನ್ನುತ್ತಿದ್ದಾರೆ. ಅವ್ಯತಸರದಂಥ ಪಂಜಾಬಿನ ನಗರಗಳಲ್ಲಿ ಆಗಿರುವ ನಷ್ಟ, ಒದಗಿರುವ ಕಷ್ಟಗಳು ಮೈ ನಡುಕವನ್ನು ಉಂಟು ಮಾಡುತ್ತಿವೆ. ರಾವಣರಂಥ ಅನಾಯಕರ ಕಾರ್ಯಭಾರದ ಪರಿಣಾಮವಾಗಿ ಕೊಲೆ, ಬಲಾತ್ಕಾರದ ಧರ್ಮಭ್ರಷ್ಟತೆ ಇತ್ಯಾದಿ ಭಯಾನಕ ಅತ್ಯಾಚಾರಗಳು ತಡೆ ಇಲ್ಲದೆ ನಡೆದು ಹೋಗಿವೆ; ಅವುಗಳ ಲೆಕ್ಕ ಎನ್ನೂ ಸರಿಯಾಗಿ ಸಿಕ್ಕಿಲ್ಲ. ಈ ಸಂದರ್ಭದಲ್ಲಿ ದೇಶದ ಪ್ರತಿಯೊಂದು ರಾಜಕೀಯ ಪಂಗಡದ ಮುಂದಾಳುಗಳೂ, ಈ ಘಟನೆಗಳ ಎಚಾರದಲ್ಲಿ ಗಭೀರವಾದ ಚಿಂತಾಭಯಗಳನ್ನು ಪ್ರದರ್ಶಿಸಿರುವರಾದರೂ, ಮುಸ್ಲಿಂ ಲೀಗಿನವರು ಮಾತ್ರ ಬೇರೆ ಪ್ರಪಂಚದಲ್ಲೇ ಇರುವಂತೆ ತೋರುತ್ತದೆ. ಬಿಹಾರಿನ ಘಟನೆಗಳ ಕುರಿತು ಭೂಮ್ಯಾಕಾಶಗಳೊಂದಾಗುವಂತೆ ಬೊಬ್ಬಾಟ ಮಾಡಿದ ಇವರ ಇಂದಿನ ಈ ರೀತಿಯ ಮನೋವೃತ್ತಿ ಅರ್ಥವತ್ತಾಗಿದೆ. ಅದರಲ್ಲಿಯೂ ಎಂ. ಜಿನ್ನಾ ಸಾಹೇಬರು ಹಿಂದುಸ್ಥಾನದಲ್ಲಿ ಆಕಾಶವೇ ಕಳಚಿ ಬಿದ್ದರೂ ಸರಿ ಎಂಬಂತೆ, ಇನ್ನೂ ಪಾಕಿಸ್ತಾನದ ಮಂತ್ರವೊಂದನ್ನೇ ಈಗಲೂ ಗಟ್ಟಿಯಾಗಿ ಜಪಿಸುತ್ತ ಕುಳ್ಳಿರುವುದು ಆ ಮನೋವೃತ್ತಿಯ ಒಂದು ಉಜ್ವಲ ನಿದರ್ಶನವಾಗಿದೆ. ಹೇಗೂ ಮುಸ್ಲಿಮರೇ ಬಹು ಸಂಖ್ಯಾಕರಾಗಿರುವ ಒಂದು ಅಧಿಪತ್ಯದಲ್ಲಿ ನಡೆದಿರುವ ಈ ದುರ್ಘಟನೆಗಳಿಂದ ಲೀಗಿನವರಿಗೆ ಮತ್ತು ಎಂ. ಜಿನ್ನಾರವರಿಗೆ,—ಅವರಿಗೆ ಇರುವಾಪ ಪಾಕಿಸ್ತಾನದ ವರಸಿದ್ಧಿ ದುರ್ಲಭವೆಂದೇ ಸ್ಪಷ್ಟವಾಗುತ್ತದೆ. ದಿನದಿನ ಪಂಜಾಬಿನಲ್ಲಿ ನಡೆಯುತ್ತಿವೆ ಎಂದು ಬರುತ್ತಿರುವ ಆ ವಾರ್ತೆಗಳಿಂದ ಇಡಿಯ ಹಿಂದುಸ್ಥಾನವೇ ತಳಮಳಗೊಂಡಿದೆ. ಪಂಜಾಬಿನಲ್ಲಿ "ಗಲಭೆಯೇ? ಸಿವಿಲ್ ಯುದ್ಧದ ಪೂರ್ವ ಪೀಠಿಕೆಯೇ?" ಎಂದು ಕೇಳುವವರಿದ್ದಾರೆ. ಪಂಜಾಬ್ ಅಧಿಕಾರಿಗಳ ಮೇಲೆ ನಾನಾ ರೀತಿಯ ದೂರು ಆರೋಪಗಳು ಕೇಳ ಬರುತ್ತಿವೆ. ಆದರೆ ಯಾವುದನ್ನೂ ಈಗ "ಇತ್ಥಂ" ಎಂದು ಹೇಳುವಾಗಿಲ್ಲ. ಪಂಜಾಬಿನ ಆ "ಸಮಾಧಿ ಶಾಂತಿ"ಯಂಥ ಬಿರುಗಾಳಿ ನಿಂತು, ಅಲ್ಲಿನ ಎದ್ಯಮಾನಗಳು ಸಮಗ್ರವಾಗಿ ಸಾಧಾರವಾಗಿ ತಿಳಿದು ಬಾರದೆ, ಹೆಚ್ಚು ಮಾತಾಡಲು ಮಾರ್ಗವಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಪಂಜಾಬಿನ ಸ್ಥಿತಿಗತಿಗಳು ಉತ್ತಮಗೊಳ್ಳಲಿಕ್ಕೆ ಅಲ್ಪ ಸ್ವಲ್ಪ ಸಮಯವು ಸಾಕಾದೀತೇ ಎಂಬುದು ಸಂದೇಹವೇ ಸರಿ.

——

ಮಂಗಳೂರು
ಓರಿಯಂಟಲ್
ಬೇಡ್‌ಮಿಂಟನ್ ಕ್ಲಬ್
ಬಹುಮಾನ ವಿತರಣೆ

ಮೇಲ್ಕಂಡ ಕ್ಲಬ್ಬಿನವರು, ನಮ್ಮ ಜಿಲ್ಲೆಯ ದಿವಂಗತ ಶ್ರೀ। ಕೃಷ್ಣಪ್ಪ (ಕ್ರಿಕೆಟಿಯರ್ ಮತ್ತು ಸ್ಪೋರ್ಟ್ಸ್‌ಮ್ಯಾನ್)ನವರ ಸ್ಮಾರಕವಾಗಿ ಕಳೆದ ವರ್ಷಗಳಿಂದ ಏರ್ಪಡಿಸಿ ನಡೆಸಿಕೊಂಡು ಬರುತ್ತಿರುವ ವಾರ್ಷಿಕವಾದ ಈ ಬೆಡ್‌ಮಿಂಟನ್ ಟೂರ್ನಮೆಂಟ್ ಈ ಬಾರಿ ಕಳೆದ ತಾ. ೧೪ನೇ ಶುಕ್ರವಾರ ಬೆಳಿಗ್ಗೆ ಕೊನೆಗೊಂಡು, ಆ ಸಂಬಂಧದ ಬಹುಮಾನ ವಿತರಣವು, ಅದೇ ಸಂಜೆ, ಜಿಲ್ಲಾ ಬೋರ್ಡು ಸಭಾ ಭವನದಲ್ಲಿ ರಾವ್‌ಬಹದೂರ್ ಎನ್. ಎನ್. ಸುವರ್ಣರ ಅಧ್ಯಕ್ಷತೆಯಲ್ಲಿ ಜರುಗಿತು. ಕಾರ್ಯದರ್ಶಿ ಶ್ರೀ। ಎ. ಶಂಕರಯ್ಯ, ಅವರು ಅತಿಥಿಗಳನ್ನು ಸ್ವಾಗತಿಸಿ, ಅಧ್ಯಕ್ಷರ ಹಸ್ತದಿಂದ ಶ್ರೀ। ಕೃಷ್ಣಪ್ಪ ಅವರ ಚಿತ್ರಕ್ಕೆ ಪುಷ್ಪಮಾಲಿಕೆಯನ್ನು ಹಾಕಿಸಿ ಅಲಂಕರಿಸಿದ ಬಳಿಕ—ಅಧ್ಯಕ್ಷರು ಶ್ರೀ। ಕೃಷ್ಣಪ್ಪನವರ ಚಾತುರ್ಯ, ಅವರ ಜನಪ್ರಿಯತೆ; ಭಾರತದಲ್ಲೇ ಒಬ್ಬ ಪ್ರಸಿದ್ಧ ಕ್ರಿಕೆಟ್ ಆಟಗಾರರಾಗುವಂಥ ಯೋಗ್ಯತೆಯುಳ್ಳ ಶ್ರೀ। ಕೃಷ್ಣಪ್ಪನವರು, ಬಡತನದ ದೆಸೆಯಿಂದ ಹೇಗೆ ಹಿಂದುಳಿಯುವೇಕಾಯಿತೆಂಬ ವಿಚಾರ; ಮೂಲೆಯ ಈ ಜಿಲ್ಲೆ ಆಟಪಾಟಗಳಲ್ಲಿ ಮದ್ರಾಸಿನ ಇತರ ಕಡೆಗಳಿಂದ ಯಾವ ರೀತಿಯಲ್ಲಿ ಕಡೆಗಣಿಸಲ್ಪಟ್ಟಿದೆಯೆಂಬ ಸಂಗತಿ-ಮೊದಲಾದುವನ್ನು ವಿಶದೀಕರಿಸಿ, ಕ್ರಿಕೆಟ್ ಮೊದಲಾದ ಆಟಪಾಟಗಳಲ್ಲಿ ನಮ್ಮ ಜಿಲ್ಲೆ ಈಗೀಗ ಹೀನ ಸ್ಥಿತಿಗೆ ಇಳಿಯುತ್ತ ಬರುತ್ತಿದೆ ಎಂದು ವಿಷಾದಿಸಿದರು. ಅನಂತರ ಗೆದ್ದವರಿಗೆ ಬೆಳ್ಳಿಯ ಕಪ್ಪು (ಹಂಗಾಮಿ); ಅಲ್ಲದೆ ಗೆದ್ದ ಟೀಮಿನ ೫ ಮಂದಿಗೂ, ರನ್ನರ್ಸ್ ಅಪ್ಪಿನ ೫ ಮಂದಿಗೂ ಬೆಳ್ಳಿಯ ಪದಕಗಳನ್ನೂ ಅಧ್ಯಕ್ಷರು ಹಂಚಿ ಗೌರವಿಸಿದರು

ಕಾರ್ಯದರ್ಶಿ ಶ್ರೀ। ಶಂಕರಯ್ಯನವರು ಓದಿದ ಕ್ಲಬ್ಬಿನ ೭ನೇ ವಾರ್ಷಿಕ ವರದಿಯಲ್ಲಿ, ಈ ಸಲದ ಪಂದ್ಯಾಟಕ್ಕೆ ೧೬ ಟೀಮುಗಳು ಬಂದಿವೆ; ಕ್ಲಬ್ ಜನಾದರಕ್ಕೆ ಪಾತ್ರವಾಗಿದೆ ಎಂದು ಮುಂತಾಗಿ ಇತ್ತು.

ಶ್ರೀ। ಬಿ. ಗಂಗಾಧರ ದಾಸರು, ಶ್ರೀ। ಕೃಷ್ಣಪ್ಪನವರ ಜೀವನದ ಕುರಿತಾದ ತಮ್ಮ ಗೆಳೆತನದ ಅನುಭವದ ಮಾತುಗಳನ್ನಾಡಿ, ಅವರ ಗುಣ-ಕಥನ ಮಾಡಿದರು.

ಅಧ್ಯಕ್ಷರು ತಮ್ಮ ಕೊನೆ ನುಡಿಗಳಲ್ಲಿ ಈ ಕ್ಲಬ್ ಸಾರ್ವಜನಿಕವಾದ ವಿಶಾಲ ದೃಷ್ಟಿ ಇರಿಸಿ, ಊರಿನ ಯಾವತ್ತೂ ಬಗೆಯ ಆಟಗಾರರ ಹಿತಸಾಧನೆಗಾಗಿ ಅನುಸರಿಸಬೇಕಾದ ಉಪಾಯ ಮುಖ್ಯ ಕರ್ತವ್ಯಗಳ ಕುರಿತು ಹಿತ ಸೂಚನೆ ಕೊಟ್ಟರು.

ಶ್ರೀ। ಶಂಕರಯ್ಯನವರು ವಂದಿಸಿದರು. ಈ ಸಮಾರಂಭದಲ್ಲಿ ಅಲ್ಪಾಹಾರ ಉಪಚಾರವೂ ನಡೆದಿತ್ತು.

ಸ್ವೀಕಾರ

ಪಾರ್ಕೊ ನೀಮೊಲ್ ಟ್ಯೊಲೆಟ್ ಸೋಪ್ (ಬೆಲೆ ಒಂದಕ್ಕೆ) ಆರಾಣಿ ಮತ್ತು **ಪಾರ್ಕೊ ಸ್ಯಾಂಡಲ್ ಡಿ-ಲಕ್ಸ್ ಸೋಪ್** (ಬೆಲೆ ಒಂದಕ್ಕೆ ರೂ. ೦—೬—೯) ಇವೆರಡು ಸಾಬೂನುಗಳನ್ನೂ ಅತ್ಯಾದರದಿಂದ ಸ್ವೀಕರಿಸಿದ್ದೇವೆ. ಎರಡೂ ಉತ್ಕೃಷ್ಟವಾಗಿವೆ; ಬಾಳಿಕೆ ಮತ್ತು ಮಧುರ ಸುವಾಸನೆಯಲ್ಲಿ ಹಿರಿದಾಗಿದ್ದು ಸ್ತ್ರೀ ಪುರುಷರ ಸ್ನಾನಕ್ಕೂ ಶೃಂಗಾರಕ್ಕೂ ಅತ್ಯಂತ ಉಪಯುಕ್ತವಾಗಿವೆ. ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಸೋಲ್ ಡಿಸ್ಟ್ರಿಬ್ಯೂಟರರು ಮೆಸರ್ಸ್‌ಗಳಾದ ಎ. ಎಮ್. ಎನ್. ರುಡ್ ಏಜನ್ಸಿಯವರು:— ಎಳಾಸ, ಪೋಸ್ಟ್ ಬಾಕ್ಸ್ ೧೪೨, ಮೈದಾನ್ ರೋಡ್, ಮಂಗಳೂರು.

——

ಪತ್ರ ವ್ಯವಹಾರ
ಹೊಟೇಲುಗಳ ಸಕ್ಕರೆ ಕಡಿತ

ಅಯ್ಯಾ ಕಂಠೀರವ,

ಇದೇ ಕಳೆದ ಫೆಬ್ರುವರಿ ತಿಂಗಳಲ್ಲಿ ಮಂಗಳೂರಿನ ಕೆಲವು ಪ್ರಮುಖ ಹೊಟೇಲುಗಳ ಸಕ್ಕರೆ ಕೋಟಾವನ್ನು ಕಡಿಮೆ ಮಾಡಿದ ಎಚಾರದಲ್ಲಿ ಆ ಹೊಟೇಲುಗಳು ತಿಂಗಳ ಆಖೈರಿಯಲ್ಲಿ ಮೂರು ದಿನ

ಮುಚ್ಚಿದ ವಿಷಯವು ನಿನಗೆ ತಿಳಿದಿರ ಬಹುದು.

'ಕಂಠೀರವ'ನೂ ನನ್ನಂತೆ ಬಡ ಕುಟುಂ ಬದವನಾಗಿರುತ್ತಿದ್ದರೆ, ದಿನಕ್ಕೆ ಕಡಮೆ ಯೆಂದರೆ ಮೂರು ಸಲವಾದರೂ ಹೊಟೆ ಲಿಗೆ ಹೋಗಿ ಫಲಾಹಾರ ಮಾಡುವವನಾ ಗಿದ್ದರೆ, ನನ್ನಂಥ ಬಡ ಯಾ ಮಧ್ಯಮ ತರಗತಿಯ ನಾಗರಿಕನಿಗೆ ಯಾವ ತರಹ ತೊಂದರೆಯಾಗಿರಬಹುದೆಂದು ಸ್ವತಹ ಅನುಭವವಾಗುತಿತ್ತು!

ಕಾಫಿ ಹೊಟೆಲುಗಳೆಂದರೆ ನಾಗರಿಕನ ಜೀವನದಲ್ಲಿ ಅವಶ್ಯವಾದ ಒಂದು ಸಂಸ್ಥೆ. ಮನೆಗಳಲ್ಲಿ ಹೊತ್ತಿಗೆ ಸರಿಯಾಗಿ ಫಲಾ ಹಾರವನ್ನು ಪಡೆಯಲು ಅಸಾಧ್ಯವಾದ ಕಾರಣ, ಬಡ ಮತ್ತು ಮಧ್ಯಮ ತರಗ ತಿಯ ಕೆಲಸಗಾರರು ಹೊಟೆಲುಗಳಿಗೆ ಹೋಗಬೇಕಾಗುವುದು. ಅಲ್ಲದೆ ಮನೆ ಯಲ್ಲಿ ಬೇಕಾದ ತಿಂಡಿ ತಿನಸುಗಳನ್ನು ತಯಾರಿಸುವುದೇ ಆದರೂ, ಅದಕ್ಕೆ ಬೇ ಕಾದ ಸಾಮಾನು ಸಾಹಿತ್ಯ ವ ಜನ ಸಹಾ ಯವಿಲ್ಲದೆ, ಹೊಟೆಲನ್ನು ನಂಬಿರಬೇಕಾಗು ವುದು; ಹೀಗಿರುವಾಗ ನಗರದ ಮುಖ್ಯ ಕಡೆಗಳಲ್ಲಿನ ಹೊಟೆಲುಗಳನ್ನು ಆತನು ಆಶ್ರಯಿಸುವುದರಲ್ಲಿ ತಪ್ಪೇನು? ಇಂತಹ ಆತ್ಯಯದಿಂದಾಗಿ ಹೊಟೆಲು ಸುಧಾರಿಸಿ, ತನ್ನ ಗಿರಾಕಿಗಳಿಗೆ ಅನುಕೂಲವಾದ ತಿಂಡಿ ಪಾನೀಯಗಳನ್ನು ತಯಾರಿಸಿ ಕೊ ಡುತ್ತಿರುವುದು.

ಹಿಂಗಿರಲು ಜಿಲ್ಲಾ ಆಹಾರ ಸಮಿತಿ ಯಾಗಲೀ ಅಧಿಕಾರಿ ವರ್ಗದವರಾಗಲೀ ಒಮ್ಮೆಯೇ ಹೊಟೆಲುಗಳ ಸಕ್ಕರೆ ಕೋಟ ವನ್ನು ಕಡಿಮೆ ಮಾಡುವುದು ಯಾವ ನ್ಯಾಯ? ಇದರಿಂದಾಗಿ ತೊಂದರೆ ಪಡು ವವರು ಹೊಟೆಲು ಮ್ಯಾಲಿಕರಲ್ಲ! ಜನ ಸಾಮಾನ್ಯ ಬಡ ನಾಗರಿಕರು. ಸ ಮಾಜದಲ್ಲಿ ನವಂತರಾಗಿರುವವರು ವ ಅಧಿ ಕಾರ ವರ್ಗದಲ್ಲಿ ಶ್ರೇಷ್ಠ ತರಗತಿಯಲ್ಲಿ ರುವ ಹಣವಂತರು ಹೊಟೆಲಿಗೆ ಬರುವ ಅವಶ್ಯವಿಲ್ಲ. ಅವರು ತಮ್ಮ ಮನೆಯಲ್ಲಿ ನೌಕರರನ್ನಿಟ್ಟು ತಿಂಡಿ ತಿನಸುಗಳನ್ನು ತಯಾರಿಸಬಹುದು. ಅಲ್ಲದೆ ಅನೇಕ ಹಣವಂತರಿಗೆ ದೇಹದ ಆಸೌಖ್ಯದಿಂದಾಗಿ ತಿಂದುದು ಜೀರ್ಣಿಸದೆ ತಿಂಡಿ ತಿನಸುಗಳ ಅಗತ್ಯವೇ ಇಲ್ಲದಿರಬಹುದು—ಆದರೆ ಚೆ ನ್ನಾಗಿ ದುಡಿಯುವ ಬಡ ನಾಗರಿಕನಿಗೆ ತೊಂದರೆ ಕೊಡುವುದು ಯಾವ ನ್ಯಾಯ? ಜನತಾ ಪ್ರತಿನಿಧಿಗಳಿಗಾಗಲೀ ಅಧಿಕಾರಿ ಗಳಿಗಾಗಲೀ ಇದು ಸರಿಯಲ್ಲ.

ಆದುದರಿಂದ ಇನ್ನಾದರೂ ಬಡ ನಾಗ ರಿಕರಿಗೆ ಹೀಗೆ ಪಜೀತಿಯಾಗದಂತೆ ಸಕ್ಕರೆ ವಿತರಣೆ ಸರಿಯಾಗಿ ನಡೆಯುವುದೆಂದು ನಂಬುತ್ತೇನೆ.

ಓಹೋ ಮರೆತೆ! ಕೆಲವರಿಗೆ ಹೊ ಟೆಲು ಮ್ಯಾಲಿಕರು ಹಣ ಸಂಪಾದಿಸುವ ರೆಂಬ ಒಂದು ಮತ್ಸರದ ಮಾತಿರಬಹುದು. ಪ್ರತಿಯೊಂದು ಹೊಟೆಲು ತಿಂಡಿ ಪಾನೀ ಯದ ಕ್ರಯವನ್ನು ಕಂಟ್ರೋಲ್ ಮಾಡಿ, ನಮ್ಮ ಜಿಲ್ಲೆಯಲ್ಲಿ ಹೊಟೆಲು ಮ್ಯಾಲಿಕರು ಸುಲಿಗೆ ಮಾಡದಂತೆ ಕಳೆದ ಮೂರು ವರ್ಷಗಳಲ್ಲಿ ಸರಕಾರವು ಜಾಗ್ರತೆ ಮಾ ಡುವ ಕಾಲದಲ್ಲಿ, ನಮ್ಮ ಜಿಲ್ಲೆಯ ಹೊಟೆ ಲುಗಳು ಹಣ ಮಾಡುವುದೆಂಬ ಆರೋಪ ಣೆಗೆ ಎಡೆಯಿಲ್ಲ. ಸರಕಾರವು ಕ್ರಯ ನಿಯಂತ್ರಣ ಮಾಡಿ ಹೊಟೆಲುಗಳು ಆ ಕಂಟ್ರೋಲ್ ಕ್ರಯಕ್ಕೇನೇ ಜನ ಸೇವೆ ಮಾಡಬೇಕೆಂದು ಸರಕಾರವಿರುವಾಗ, ಹಣ ಮಾಡುತ್ತಿವೆ ಎಂಬ ಸಂಕುಚಿತ ಬುದ್ಧಿ ಯಿಂದ ನಾಗರಿಕರಿಗೆ ತೊಂದರೆ ಕೊಡು ತ್ತಿರುವ ಆ ನಮ್ಮ ಜಿಲ್ಲಾ ಸಮಿತಿಯ ದರ್ಪ ದ ಪ್ರತಿಭಟನೆಗಾದರೂ ಬೆಲೆಯಿದೆಯೇ?

ಇನ್ನು ಮುಂದಾದರೂ ನ್ಯಾಯವಾಗಿ ನಮ್ಮ ನಮ್ಮ ತಿಂಡಿ ತಿನಸುಗಳು ಸರಾಗ ವಾಗಿ ನಮಗೆ ಸಿಗುವಂತಾದೀತೆಂಬ ಹಾರೈಕೆ—

"ಹೊಟೆಲು ತಿಂಡಿ ತಿನ್ನುವ ನಾಗರಿಕ"

——

NOTICE
In the Court of the Subordinate Judge of South Kanara

A. S. No. 243/1946.

Between:—
Nalipurapatha Erumulan— Appellant.

and

A. C. Koman Nair and others— Respondents.

To

R. 4. Manikkan, wife of Kalthangal Kannan.
R. 5. Ambady Belehandam,
R. 6. Kunhamma, R. 7. Chirutha,
R. 8. Ambu—Children of Kalthangal Kannan—All are residing in Neleshwar village of Kasaragod Taluk.

Please take notice that the abovenamed appellant has filed an appeal in the above court against the docree and Judgment in O. S. No. 250/44, D/.22—7—1946 on the file of the D. M. C. of Kasaragod—and the same is posted on 2—4—1947 for hearing and you have to appear on the said date either in person or by pleader, otherwise the same will be decided in your absence

G. Somasheker Rao,
Vakil for Appellant.

Mangalore, 11—3—1947.

——

NOTICE
In the Court of the District Judge of South Kanara

O. P. No. 30 of 1947.

In the matter of the guardianship of minors:

1. Satyavathi, 2. Jayalaxmi, 3. Jayarama, 4. Shivaraja — Minors.

1. Made alias Mahadevi,
2. K. P. Sukumara,
3. Damodara — Petitioners.

Please take notice that the above petition filed by the petitioners to appoint the 1st petitioner as the guardian of the person and property of the abovenamed minors, will come on for hearing on 10—4—1947 at 11 A. M. in the above court. Persons interested may come and oppose the petition.

M. A. KAMATH,
Vakil for petitioners.

Mangalore, 6—3—1947.

ಕಾಸರಗೋಡು ಡಿ. ಮುನ್ಸಿಫ್ ಕೋರ್ಟ್‌ನಲ್ಲಿ

S. C. 411/1946.

ಪಿ. ಸಂಜೀವ ರಾವ್, ಪಿ. ವೆಂಕಟ್ರಾಯರ ಮಗ, ವಕೀಲ್ ಮತ್ತು ಮಂಗಳೂರು ಸಬ್ ಕೋರ್ಟು O. S. 122/1934ನೇ ನ್ಯಾಜ್ಯ ದಲ್ಲಿ ನೇಮಕಪಟ್ಟ ರಿಸೀವರ್ ಮಂಗಳೂರು ತಾಲೂಕು ಮಂಗಳೂರು ಶಹರದಲ್ಲಿ—ವಾದಿ.

ಮತ್ತು

ಆಬ್ದುಲ್ಲ ಖಾದ್ರಿ ಬ್ಯಾರಿ, ಆತ್ತೆ ಹಾಜಿ ಮಗ, ತೆಕ್ಕಿಲ ಗ್ರಾಮದ ತ್ರೈತಿಯಲ್ಲಿರುವವ —ಪ್ರತಿವಾದಿ.

ಮೇಲ್ಕಂಡ ಪ್ರತಿವಾದಿಗೆ ಬರಕೊಟ್ಟ ಜಾ ಲಗೇಣಿ ಚೀಟು ಮೇರೆಗೆ ಬಹಾ ಗೇಣಿ ಐವ ಜನ್ನು ಬರಮಾಡಿಕೊಳ್ಳುವರೆ ವಾದಿಯು ದಾ ಕ್ಲು ಮಾಡಿದ ಮೇಲ್ಕಂಡ ನ್ಯಾಜ್ಯವು ತನ್ನಿ ಬಗೆ ತಾ. 21—3—1947ಕ್ಕೆ ಇಟ್ಟಿರುವುದರಿಂದ ಈ ಕುರಿತು ಆಕ್ಷೇಪವಿದ್ದವರು ಸದ್ರಿ ದಿವಸ ಮೇಲ್ಕಂಡ ಕೋರ್ಟಿಗೆ ಹಾಜರಾಗಿ ಉದಾಹ ರಿಸತಕ್ಕದೆಂತ ಈ ಮೂಲಕ ತಿಳಿಸೋಣಾ ಗುತ್ತದೆ.

K. Kamalaksha Kamath,
ವಾದಿ ಕಡೆ ಎಡ್ವಕೇಟ್.

ಕಾಸರಗೋಡು, ತಾ. 14—3—1947.

THE KARNATAKA THEATRES, LIMITED.

Registered Office:
Jayant Building,
Maidan Road, MANGALORE.

NOTICE is hereby given pursuant to Section 37 of the Indian Companies Act, 1913, that the REGISTER OF MEMBERS of the above Company will be kept closed from the 26th March, 1947 till the day of 9th April, 1947 (both inclusive.)

By order of the Board of Directors
For Janasons, Ltd.,
(Managing Agents)
Sd. B. RAJEEVA SHETTY,
Secretary.

Mangalore, 18—3—1947.

ಮುಲ್ಕಿ ನರ್ಕಲ್ ಕಾಂಗ್ರೆಸ್ ಕಮಿಟಿ ಚುನಾವಣೆ

ನಾಮ ಪತ್ರದ ಕೊನೆಯ ತಾರೀಕು—ಮಾರ್ಚ್ ತಾರೀಕು ೧೯ನೇ ಸಂಜೆ ೫ ಗಂಟೆ

ಶ್ರೀ ಪಿ. ರಾಮಚಂದ್ರ ಭಟ್ ಸಿ/ಒ ರಾಧಾಕಾಂತ ಪ್ರೆಸ್, ಮೂಲ್ಕಿ ಇವರಿಗೆ ತಲ್ಪಬೇಕು. ಮಾರ್ಚಿ ೨೦ನೇ ತಾರೀಕಿನ ಸಂಜೆ ೫ ಗಂಟೆ ಳಕ್ಕೆ ಶ್ರೀ ಸಮರ್ಥ ವ್ಯಾಯಾಮ ಶಾಲೆಯ ಮಂದಿರದಲ್ಲಿ ನಾಮ ಪತ್ರಗಳ ಪರಿಶೀಲನೆ ನಡೆಯುವುದು. ಅದೇ ದಿನ ಹುರಿಯಾಳುಗಳ ಹೆಸರುಗಳನ್ನು ಪ್ರಸಿದ್ಧಿಸಲಾಗುವುದು. ಚುನಾವಣೆಯು ತಾ. ೨೫-೩-೪೭ಕ್ಕೆ ನಡೆಯುವುದು. ಚುನಾವಣೆಗೆ ಸಂಬಂಧ ಪಟ್ಟ ಮಾಹಿತಿಗಳನ್ನು ಪಿ. ರಾಮಚಂದ್ರ ಭಟ್, C/o ಶ್ರೀ ರಾಧಾಕಾಂತ ಪ್ರೆಸ್, ಮೂಲ್ಕಿ ಇವರ ಸಮಕ್ಷಮವಾಗಲೀ ಪತ್ರ ವ್ಯವಹಾರ ಮೂಲಕವಾಗಲೀ ಪಡೆಯಬ ಹುದು—ಎಂದು ಮೂಲ್ಕಿ ಸರ್ಕಲಿನ ಕಾಂಗ್ರೆಸ್ ಚುನಾವಣಾಧಿಕಾರಿಗಳು ತಿಳಿ ಸುತ್ತಾರೆ.

——

ಪದ್ಮಶಾಲಿ ಸಮಾಜ ಸೇವಾ ಸಂಘ— ಬೊಂಬಾಯಿ

ಮೇಲಿನ ಸಂಘದ ಹನ್ನೊಂದನೆ ವಾ ರ್ಷಿಕೋತ್ಸವವು ಶ್ರೀ ಎ. ಬಿ. ಸೆಟ್ಟಿಗಾರರ ಅಧ್ಯಕ್ಷತೆಯಲ್ಲಿ ಮುಂಬಾಯಿ ಕೋಟೆಯೊ ಳಗೆ ಜರಗಿ ಸಂಘದ ೧೯೪೬ನೇ ಇಸವಿಯ ಕಾರ್ಯನಿರ್ವಾಹಕ ಸಮಿತಿಗೆ ಈ ಕೆಳಗಿನ ಮಹನೀಯರನ್ನು ಆರಿಸಲಾಗಿದೆ:—ಶ್ರೀ ಗಳಾದ ಕೆ. ಸಿ. ಸೆಟ್ಟಿಗಾರ ಅಧ್ಯಕ್ಷ; ದಾಸ ಬಿ. ಸೆಟ್ಟಿಗಾರ ಮತ್ತು ತಿಮ್ಮಯ ಸೆಟ್ಟಿಗಾರ, ಗೌರವ ಕಾರ್ಯದರ್ಶಿಗಳು; ನಾರಾಯಣ ಬಿ. ಸೆಟ್ಟಿಗಾರ ಮತ್ತು ಶೇಸಪ್ಪ ಸೆಟ್ಟಿಗಾರ ಕೋಶಾಧಿಕಾರಿಗಳು; ಸಮಿತಿ ಸದಸ್ಯರು—ಶ್ರೀಗಳಾದ ಎ. ಬಿ. ಸೆಟ್ಟಿಗಾರ, ಗೋವಿಂದ ಎ. ಸೆಟ್ಟಿಗಾರ, ಹೂವಯ ಕೆ. ಸೆಟ್ಟಿಗಾರ, ಹೊನ್ನಯ ಎಸ್ ಸೆಟ್ಟಿಗಾರ, ಈಶ್ವರ ಎಸ್. ಶೆಟ್ಟಿಗಾರ, ಸಂಕಯ ಜೆ. ಸೆಟ್ಟಿಗಾರ. ಮಂಜಯ ಸೆಟ್ಟಿಗಾರ

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇಸರಿಕೆಗಳನ್ನು ಹೋಗಲಾಡಿ ಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರಿ ಹೋಗುವದು ಶಕ್ಯವಿರುವುದಿಲ್ಲ —ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ. ಹೊ ವಾಂತಿ, ಅಪಚನ, ತಲೆ ನೋವು, ಮೈನೋವು, ಹಲ್ಲುನೋವು, ಮಲ ವಿಕಾರ ಇತ್ಯಾದಿ ಅನೇಕ ಚಿಲ್ಲರೆ ಬೇನೆಬೇಸರಿಕೆಗಳನ್ನು ಫೈನ್ ಜೀವನ್ ಮಿಕ್ಶ್ಚರ್ ನಿಸ್ಸಂಶಯವಾಗಿ ಕಾಲದ ಮತ್ತು ಆಮಾಂಶಗಳಂಥ ಘಾತುಕವಾದ ಪದಾರ್ಥಗಳ ಮೇಲೆ ಜಾಡುಮಾಡಿದಂತೆ ಇದರ ಉಪಯೋಗವಾಗುತ್ತದೆ. ಹಾಕ್ಟರುಗಳಿದ್ದಾಗ ಯಾವಾಗಲೂ ಇದನ ಉಪಯೋಗವಾಗುವದರಿಂದ ಇದೂ ಒಂದು ಬಾಟ್ಲಿಯನ್ನು ಮನೆಯಲ್ಲಿಯೂ ಮತ್ತು ಪ್ರವಾಸದಲ್ಲಿ ಹತ್ತಿರವೂ ಇಟ್ಟುಕೊಳ್ಳುವುದು (ಉತ್ಕೃಷ್ಟ ಮುಂಜಾಗ್ರತೆಯ ಉಪಾಯವಾಗಿದೆ) ಮೂಡದೋಷದ ಲಕ್ಷಣವಾಗಿದೆ. ಕೊಸ್ಕರ್ದಲ್ಲಿಯೂ (ಔಷಧ ವ್ಯಾಪಾರ ಗಳಲ್ಲಿಯೂ) ಹಕ್ಕಗಳಲ್ಲಿ ಅಂಗಡಿಕಾರರಲ್ಲಿಯೂ ದೊರೆಯುತ್ತದೆ.

ಎಮ್. ಬಿ. ಜೀವೋಜಿಯನ್ ಮತ್ತು ಕಂ. ಪ್ರಿನ್ಸೆಸ್ ಸ್ಟ್ರೀಟ್, ಮುಂಬಾಯಿ



ಬಿರ್ಲಾ ಲ್ಯಾಬೊರೇಟರಿಗಳ ಒಂದು ತಯಾರಿಕೆ.

(೩ನೇ ಪುಟದಿಂದ)

ಮುಸ್ಲಿಮರ ಕ್ರೋಧಕ್ಕೆ ಆಹುತಿ ದ್ದಾರೆ. ಆದರೆ ಬಂಗಾಳ ಬಿಹಾರುಗ ಘಟ್ಟಣೆಗಳ ಸಮಯ ಕೇಂದ್ರ ಸರಕಾರವು ಕಣ್ಣು ಮುಚ್ಚಿ ಕೂತಂತೆ ಈ ಸಲ ಕಣ್ಣು ಮುಚ್ಚಿ ಕೂತಿರುವುದಿಲ್ಲ. ಡಿಫೆನ್ಸ್ ಖಾತೆಯ ಮಂತ್ರಿಯರಾದ ಬಲದೇವ ಸಿಂಗರೂ ಪ್ರಧಾನ ಸಚಿವರಾದ ಜವಾಹರ ಲಾಲರೂ ಪಂಜಾಬಿನ ರಣ ಭೂಮಿಯನ್ನು ಕೂಲಂಕಷ ಪರೀಕ್ಷಿಸಿ, ಶಾಂತಿಯನ್ನು ಶೀಘ್ರದಿಂದ ಸ್ಥಾಪಿಸಲಿಕ್ಕೆ ಅಲ್ಲಿ ಬೇಕಾಗುವ ಏರ್ಪಾಡುಗಳನ್ನು ಮಾಡಿರುತ್ತಾರೆ. 'ಈ ಪಂಜಾಬಿನ ಪ್ರಕರಣದಿಂದ ಪಾಕಿಸ್ತಾನ ಸ್ಥಾಪನೆಯ ಪ್ರಯತ್ನವು ಯಾವ ಕಾಲಕ್ಕೂ ಸಿದ್ಧಿಸದಂತಾಯಿತಲ್ಲದೆ ಲೀಗಿಗೇನು ಪ್ರಯೋಜನವಾಗುವಂತಿಲ್ಲ ಬಂಗಾಳ ಪಂಜಾಬುಗಳಲ್ಲಿ ಅರ್ಧ ಪ್ರಾಂತ್ಯದಲ್ಲಿ ಮುಸ್ಲಿಮರ ಬಹು ಸಂಖ್ಯೆ ಅರ್ಧ ಪ್ರಾಂತ್ಯದಲ್ಲಿ ಮುಸ್ಲಿಮೇತರರ ಬಹು ಸಂಖ್ಯೆ ಇರುತ್ತದೆ. ಲೀಗಿಗೆ ಪಾಕಿಸ್ತಾನವೇ ಬೇಕಾದರೆ ಮುಸ್ಲಿಮೇತರರಿರುವ ಅರ್ಧಾಂಶಗಳನ್ನು ಆ ಪ್ರಾಂತ್ಯಗಳಿಂದ ಪ್ರತ್ಯೇಕಿಸುವದೊಂದೇ ದಾರಿ ಉಳಿದಿದೆ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಮೊನ್ನೆ ಮಾರ್ಚಿ ೮ನೇ ತಾರೀಕಿನ ದಿನ ಡಿಲ್ಲಿಯಲ್ಲಿ ಕೂಡಿದಾಗ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತದೆ; ಮಾತ್ರವಲ್ಲ, ಆ ಅಭಿಪ್ರಾಯಕ್ಕೆ ಈಗ ಒಂಗಾಳ ಮತ್ತು ಪಂಜಾಬಿನ ಮುಸ್ಲಿಮೇತರರ ಬೆಂಬಲವೂ ದೊರಕಿದೆ. ಆಳಿದ ಹಿಂದ್ಮೆಯರೊಡನೆ ಸಹಕಾರವನ್ನಪೇಕ್ಷಿಸದ ಲೀಗಿನ ಕೈಕೆಳಗೆ ಲೀಗಿನ ಮುಸ್ಲಿಮರಲ್ಲದೆ ಇತರರು ನೆಮ್ಮದಿಯಿಂದ ಬಾಳುವಂತಿಲ್ಲವೆಂಬುದು ಈಗ ಎದಿತವಾಗಿರುತ್ತದೆ. ಇತರರಿಗಾಗಿ ಸಿದ್ಧಪಡಿಸಿದ ನೇಣು ಲೀಗಿನ ಕೊರಳಿಗೇ ಹಾರವಾಗುವಂತಿದೆ. ಲೀಗೀಗ ಅಸ್ಸಾಮಿನಲ್ಲಿ ಮುಸ್ಲಿಂ ಸಂಖ್ಯೆ ಹೆಚ್ಚಿಸುವ ಪ್ರಯತ್ನಗಳಲ್ಲಿದೆ. ನ್ಯಾಯಕ್ಕೆ ಎಂಥ ಎಷ್ಟು ಕಾಲ ಯಾವ ಪ್ರಮಾದಗಳನ್ನೆಲ್ಲ ಈ ರೀತಿ ಲೀಗಿನ ಮುಖಂಡರು ತಂದೊಡ್ಡಿದರೂ ಈ ಹಿಂದುಸ್ಥಾನವು ಒಂದೇ ರಾಷ್ಟ್ರವಾಗಿದೆಯಲ್ಲದೆ ಇತರ ರೀತಿಯಿಂದ ಬಾಳಿಕೊಂಡು ಬರಲಾರದೆಂಬುದು ಈಗ ಎಲ್ಲರಿಗೂ ನಿಶ್ಚಯವಾಗಿದೆ. ದೇಶ ದ್ರೋಹದ ಕೃತ್ಯವಟಕೆಗಳನ್ನು ಲೀಗು ನಿರಾತಂಕವಾಗಿ ನಡೆಸುವ ದಿನಗಳನ್ನು ಹೆಚ್ಚಿರಲಾರವು.

ನಮ್ಮ ಪ್ರಾಂತ್ಯದ ಮಂತ್ರಿಮಂಡಲದ ಸಂಗತಿಗಳನ್ನೂ ಲೋಕಾಪಹಾಸ್ಯಕ್ಕೆ ಕಾರಣವಾಗಿವೆ. ಕೃಪಲಾನಿಯವರ ಸೂಚನೆಯ ಮೇರೆಗೆ ಪ್ರಕಾಶಮರು ಒಪ್ಪಿಸಿದ ರಾಜಿನಾಮೆಯನ್ನು ನಮ್ಮ ಗವರ್ನರರು ಸ್ವೀಕರಿಸದೆ ಬಜೆಟು ಕೆಲಸಗಳು ಸಂಪೂರ್ಣವಾಗುವತನಕವಾದರೂ ಪ್ರಕಾಶರು ಅಧಿಕಾರದಲ್ಲಿರಬೇಕೆಂದು ಅಪೇಕ್ಷಿಸಿದ್ದರಿಂದ ಪ್ರಕಾಶಮರಿನ್ನೂ ಮುಖ್ಯ ಮಂತ್ರಿಗಳಾಗಿಯೇ ಇದ್ದಾರೆ. ದಿನ ಹೋಗುತ್ತ ಪ್ರಾಂತ್ಯದ ಜನತೆಯಲ್ಲಿ ಅವರ ಕುರಿತು ಸಹಾನುಭೂತಿಯು ಬಲವಾಗುತ್ತಿದೆ; ಅವರ ವಿರೋಧಿಗಳು ಸ್ವಾರ್ಥಮಯ, ಅಧಿಕಾರ ಲಾಲಸೆಯಿಂದ ಪೀಡಿತರಾಗಿ ಪ್ರಕೃತ ಗೊಂದಲಕ್ಕೆ ಕೈ ಹಾಕಿರುವರೆಂಬ ಸಂಶಯಗಳೂ ಬಲವಾಗುತ್ತಿವೆ. ೧೫ನೇ ತಾರೀಕಿನಿಂದ ಮದ್ರಾಸಿನ ಶಾಸನ ಸಭೆಯಲ್ಲಿ ಬಜ್ಜೆಟ್ಟಿನ ಚರ್ಚೆಗಳು ಮುಂದರಿಯುತ್ತಿವೆ. ದಕ್ಷಿಣ ಕನ್ನಡದ ಮುಸ್ಲಿಂ ಲೀಗಿನ ಪ್ರತಿನಿಧಿಗಳೆಲ್ಲೊಬ್ಬರಾದ ಮೆ। ಜಮನಾಡು ಸಾಹೇಬರು ಕುಂಬಳೆ ಫಿರ್ಕೆಯಲ್ಲಿ ಲೀಗಿನ ಮುಖಂಡರೊಡನೆ ಸಲಹೆಯನ್ನು ಕೇಳದೆ ಖಾದಿ ಉಟ್ಟವರಿಂದಲೇ ಸರಕಾರವು ಗ್ರಾಮಾಭಿವೃದ್ಧಿಯ ಬಗ್ಗೆ ಬೇಕಾಗುವ ಉದ್ಯೋಗಸ್ಥರನ್ನು ನೇಮಕ ಮಾಡಿದ ಎಷಯ ಲೀಗಿನ ಅಸಂತುಷ್ಟಿಯನ್ನು ಶಾಸನ ಸಭೆಯಲ್ಲಿ ಹೇಳಿಕೊಂಡಿರುವರು. ದೇಶದ ಐಕ್ಯತೆ, ಉನ್ನತಿಗಳಿಗೆ ತಮ್ಮ ವಿರೋಧವನು ಅಂಜದೆ ಪ್ರದರ್ಶಿಸುತ್ತಿರುವ ಲೀಗಿನ ಪಕ್ಷದವರಿಂದ ದೇಶೋನ್ನತಿಯ ಕಾರ್ಯಗಳಿಗೆ ಉದ್ಯೋಗಸ್ಥರನ್ನು ನೇಮಿಸಿ ಹೇಗೆ ಕಾರ್ಯಗಳು ಸಫಲವಾಗಬಹುದೆಂದು ಮೆ। ಜಮನಾಡು ಸಾಹೇಬರು ಎವರಿಸಿರುವುದಿಲ್ಲ. ಲೀಗಿಗೆ ಕೋಲು ಮುರಿಯದೆ ಹಾವು ಸಾಯಬೇಕು; ಯಾರಾದರೂ ಸತ್ತು ಮುಕ್ತಿ ದೊರಕಬೇಕು.

ಡಿಲ್ಲಿಯಲ್ಲಿ ಬರುವ ವಾರದ ಪ್ರಾರಂಭದಲ್ಲಿ ಮಹತ್ವದ ಘಟನೆಗಳು ಸಂಭವಿಸುವಂತಿವೆ. ಹೊಸ ವ್ಯಾಸರಾಯರಾದ ಮೌಂಟಬೆಟ್ಟನರು ಮಾರ್ಚಿ ೨೨ನೇ ದಿನ ಡಿಲ್ಲಿಗೆ ಮುಟ್ಟಿ ಮರುದಿನ ವ್ಯಾಸರಾಯಿ ಗದ್ದುಗೆಯನ್ನೇರುವ ಸಮಯ, ಅತ್ತ ಆಸ್ಯದ ಎಲ್ಲಾ ಕಡೆಗಳಿಂದ ಬಂದ ಪ್ರತಿನಿಧಿಗಳು ನೂತನ ಸಮ್ಮೇಳನದಲ್ಲಿ ಕೂಡಿ, ಆಸ್ಯದ ಸ್ವಾತಂತ್ರ್ಯ-, ಆಸ್ಯದ ಐಕ್ಯತೆ ಉನ್ನತಿಯನ್ನು ಸಾಧಿಸಿಕೊಳ್ಳುವ ಬಗೆಯನ್ನು ಚಿಂತಿಸುವರು. ಲೀಗಿನ ಗೊಂದಲಗಳ ನಡುವೆ ವೋಡಗಳನ್ನು ಕತ್ತರಿಸಿ, ಸೂರ್ಯನು ಪ್ರಕಾಶಿಸುವಂತೆ, ಜವಾಹರ ಲಾಲರ ನೇತೃತ್ವದಲ್ಲಿ ಹಿಂದುಸ್ಥಾನವು ಆಸ್ಯದ ಜನರ ಪ್ರೀತಿಯನ್ನು ಸಂಪಾದಿಸಿಕೊಂಡು ಆಸ್ಯದ ನಾಯಕತ್ವಕ್ಕೆ ಮುಟ್ಟುತ್ತಿದೆ. ಐತಿಹಾಸಿಕ ಮಹತ್ವದ ಸಂಗತಿಗಳು ಡಿಲ್ಲಿಯಲ್ಲಿ ಜರಗುತ್ತಿರುವಾಗಲೂ ಲೀಗಿನ ಮುಖಂಡರು ತಮ್ಮ ಸಂಕೋಚ ಧ್ಯೇಯಗಳಿಂದ ಹಿಂದುಸ್ಥಾನದ ಕೀರ್ತಿಗೆ ಕಳಂಕವನ್ನು ತರುವ ಪ್ರಯತ್ನದಲ್ಲಿರುವದು ಹಿಂದೀಯರ ದೌರ್ಭಾಗ್ಯವಾಗಿದೆ. ಜವಾಹರ ಲಾಲರನ್ನು, ಇಡೀ ನಾಗರಿಕ ಜಗತ್ತೇ ಪೂಜಿಸುತ್ತಿರುವಾಗ ಲೀಗಿನ ಪುಟ್ಟ ಧ್ಯೇಯದ ಹಲವು ಜಿಗಣೆಗಳಲ್ಲಿ ಅವರ ಕುರಿತು ಕೂಡ ಪೂಜ್ಯತೆಯಿಲ್ಲದಿರುವುದು ಹಿಂದುಸ್ಥಾನದ ದೌರ್ಭಾಗ್ಯವೆಂದೂ ಹೇಳಬೇಕು.

ಇಂಡೋ ಚೀನದ ಕುರಿತು ಫ್ರಾನ್ಸಿನ ಪಾರ್ಲಿಮೆಂಟ ಸಭೆಯ ನೆಶನಲ್ ಎಸೆಂಬ್ಲಿಯಲ್ಲಿ ತೀಕ್ಷ್ಣ ಮತಭೇದವು ತಲೆದೋರಿ ಪ್ರತಿನಿಧಿಗಳಲ್ಲಿ ಮಾರ್ಚಿ ೧೪ನೇ ದಿನ ಕೈ ಕೈ ಬಡಿದಾಟ ಕೂಡ ಸಂಭವಿಸಿತು. ಫ್ರೆಂಚ ಚಕ್ರಾಧಿಪತ್ಯದೊಳಗಿಂದ ಶಾಂತಸಾಗರದ ಕಡೆ ನೋಡಲಿಕ್ಕೆ ಅಂದವಾದ ಕಿಟಕಿಯಂತಿರುವ ಇಂಡೋಚೀನವನ್ನು ಚಕ್ರಾಧಿಪತ್ಯದಿಂದ ಬಿಟ್ಟುಕೊಡಬಾರದೆಂದು ಕನ್ಸರ್ವೆಟಿವ್ ಪಕ್ಷವು ಸಾಧಿಸುತ್ತಿದೆ. ಕಮ್ಯುನಿಸ್ಟ ಪಕ್ಷದವರು ದೇಶೀಯರೊಡನೆ ಸಂಧಾನವನ್ನು ಬೆಳೆಸಿ, ಇಂಡೋಚೀನದಲ್ಲಿ ನಡೆಯುತ್ತಿರುವ ರಕ್ತಮಯ ಕಾದಾಟವನ್ನು ನಿಲ್ಲಿಸಬೇಕೆಂದು ಹವಣಿಸುತ್ತಿದ್ದಾರೆ. ಹೇಗೂ ಫ್ರೆಂಚರು ಇಂಡೋಚೀನವನ್ನು ಬಿಗ್ಗಿಸಲಿಕ್ಕಾಗಿ ಮಾಡುವ ಪ್ರಯತ್ನಗಳು ಸಫಲವಾಗುವಂತಿಲ್ಲವೆಂಬದು ಈಗ ವ್ಯಕ್ತವಾಗುತ್ತಿದೆ. ಇಂಡೋಚೀನದಲ್ಲಿ ಡಚ್ಚರಿನ್ನೂ ಹೊರಗಣ ಬಂದರುಗಳನ್ನು ಕಾದು ಕೂತಿದ್ದಾರೆ; ಸ್ಥಿರ ಸಂಧಾನವಾಗಲಿಲ್ಲ. ಪೆಲೆಸ್ಟಿನಿನಲ್ಲಿ ಶಾಂತಿಯು ತಲೆದೋರುವಂತಿಲ್ಲ.

ಅತ್ತ ಯುರೋಪಿನಲ್ಲೀಗ ಮಹಾರಾಷ್ಟ್ರಗಳಾದ ಇಂಗ್ಲಾಂಡು, ಫ್ರಾನ್ಸ್, ಅಮೇರಿಕ, ರಶ್ಯಗಳ ಪ್ರತಿನಿಧಿಗಳು ಶಾಂತಿಸ್ಥಾಪನೆಯ ಬಗೆಯನ್ನು ಚಿಂತಿಸಲಿಕ್ಕೆ ಮೊಸ್ಕೊವಿನಲ್ಲಿ ಕೂಡಿದ್ದಾರೆ. ಜರ್ಮನಿ, ಆಸ್ಟ್ರಿಯಗಳ ಭವಿಷ್ಯದ ಕುರಿತು ಅಲ್ಲಿ ಚರ್ಚೆಗಳಾಗುತ್ತಿವೆ. ಚೀನದ ಕಮ್ಯುನಿಸ್ಟ, ಕುವೊಮಿಂಟಂಗ್ ಎಂಬಾದಗಳ ಸಮಸ್ಯೆಯನ್ನು ಆ ಸಮ್ಮೇಳನದಲ್ಲಿ ಬಿಡಿಸಬೇಕೆಂದು ಅಲ್ಲಿ ಕೂಡಿದ ನಾಲ್ಕು ರಾಷ್ಟ್ರಗಳ ಎದೇ ಶಾಂಗ ಸಚಿವರು ನಿಶ್ಚೈಸಿದ್ದಕ್ಕೆ ಚೀನವು ಒಪ್ಪಲಿಲ್ಲ; ಚೀನದಲ್ಲಿ ಹೀಗಾಗಿ ಭ್ರಾತೃಯುದ್ಧವು ಬೇಗನೇ ಅಂತ್ಯವಾಗುವಂತಿಲ್ಲ. ಗ್ರೀಸ್, ತುರ್ಕಿಗಳಲ್ಲಿ ಆಂಗ್ಲರು ತಮ್ಮ ಕಾಲನ್ನು ಮೆಲ್ಲಗೆ ಹೊರಗೆ ಜಗೆಯುತ್ತಿದ್ದಾರೆ. ಅಮೇರಿಕವು ಆಂಗ್ಲರ ಸ್ಥಾನವನ್ನು ಆಕ್ರಮಿಸಿ, ಆ ರಾಷ್ಟ್ರಗಳಲ್ಲಿ ರಶ್ಯದ ವರ್ಚಸ್ಸನ್ನು ವೃದ್ಧಿಯಾಗದಂತೆ ತನ್ನ ಪ್ರಯತ್ನಗಳನ್ನು ಪ್ರಾರಂಭಿಸಿ ನಿಶ್ಚೈಸಿಯದೆ. ಯುರೋಪಿನಲ್ಲಿ ಇದರಿಂದಾಗಿ ರಶ್ಯ-ಅಮೇರಿಕಗಳ ತಿಕ್ಕಾಟಗಳಿನ್ನು ಪ್ರಬಲವಾಗುವಂತಿದೆ: ಎಜಯಿ ರಾಷ್ಟ್ರಗಳು ಕೂಡಿ, ಜರ್ಮನಿಯನ್ನು ಕಳೆದ ಶತಮಾನವೀ ಆಗಿಂದಾಗ್ಯೆ ರಣಾಭಿಮುಖವಾಗಿ ಒಯ್ಯುತ್ತಿದ್ದ ಪ್ರಸ್ಯವನ್ನು ಯುರೋಪಿನ ನಕ್ಷೆಯಿಂದಲೇ ಅಳಿಸಿ ಬಿಟ್ಟಿರುವರು. ರಶ್ಯವು ಪೂರ್ವ ಜರ್ಮನಿಯಲ್ಲಿದ್ದ ದೊಡ್ಡ ಜಏನುಗಳನ್ನೆಲ್ಲಾ ಅಲ್ಲಿಯ ಸಾಮಾನ್ಯ ಜನರಲ್ಲಿ ಹಂಚಿ ಹಾಕಿ ಸಮರೋತ್ಸಾಹದ 'ಜಂಕರ'ನ್ನು ಈಗ ನಿರ್ನಿರ್ಯರನ್ನಾಗಿ ಮಾಡಿರುತ್ತದೆ. ಫ್ರಾನ್ಸು, ಇಂಗ್ಲಾಂಡು, ಅಮೇರಿಕಗಳ ಕೆಳಗಿರುವ ಜರ್ಮನಿಯೂ ರಶ್ಯದ ಕೆಳಗಿರುವ ಜರ್ಮನಿಯೂ ಬೇರೆ ಬೇರೆ ದಾರಿಗಳನ್ನು ಹಿಡಿದು ಮುಂದರಿಯುತ್ತಿವೆ. ಅವು ಇನ್ನು ಒಂದೇ ಆರ್ಥಿಕ ಯೋಜನೆಯ ಒಕ್ಕೂಟನ ರಾಷ್ಟ್ರವಾಗುವುದು ಕಷ್ಟತರವಾಗಿದೆ. ಆದರೆ ಎಜಯಿ ರಾಷ್ಟ್ರಗಳೆಷ್ಟು ಪ್ರಯತ್ನಪಟ್ಟರೂ ಜರ್ಮನರ ಹೃದಯದಿಂದ ತಮಗಾದ್ದ ಸೋಲು ಅವಮಾನಗಳ ಸೇಡು ಅಳಿಸಿ ಹೋಗುವುದು ನಿಜವೆಂದು ತೋರುವುದಿಲ್ಲ. ಜಪಾನಿನಲ್ಲಾಗಲೀ ಜರ್ಮನಿಯಲ್ಲಾಗಲಿ ಎಜಯಿ ರಾಷ್ಟ್ರಗಳು ನಿಸ್ವಾರ್ಥದ ದೂರದರ್ಶಿತ್ವವನ್ನೆಲ್ಲಿಯೂ ಪ್ರದರ್ಶಿಸಿದ್ದಿಲ್ಲ. ಇನ್ನೊಂದು ಮಹಾಯುದ್ಧದ ಕಾರ್ಮೋಡಗಳು ಆಕಾಶವನ್ನು ಸ್ಪರ್ಶಿಸಿಕೊಂಡು ಈಗ ಚದರಿ ಮತ್ತೆ ಕೂಡುತ್ತಲಿವೆಯಲ್ಲದೆ ಆಕಾಶವನ್ನು ಬಿಟ್ಟು ಹೋಗುವಂತಿಲ್ಲ. ಲೋಕದ ನಾಯಕತ್ವವನ್ನು ಅಪೇಕ್ಷಿಸುವ ಅಮೇರಿಕವೂ, ತನ್ನ ಕಮ್ಯುನಿಜಮಿನ ಪವಿತ್ರ ಭೂಮಿಯ ಭದ್ರತೆಗೆಂದು ಹೇಳುತ್ತಾ ಹೆಜ್ಜೆಯನ್ನು ಮುಂದರಿಸುತ್ತಲೇ ಇರುವ ರಶ್ಯವೂ ರಣರಂಗದಲ್ಲಿ ಒಬ್ಬರನ್ನೊಬ್ಬರು ಪ್ರತಿಭಟಿಸುವ ಸಂದರ್ಭವು ಇಂದಲ್ಲ, ನಾಳೆ ಬಾರದಿರದು. ಅವರ ಬಲಾಬಲ ಪರೀಕ್ಷೆಯ ನಡುವೆ ಈಗ ದೀನರಾಗಿ ಬಿದ್ದಿರುವ ಜಪಾನ, ಜರ್ಮನಿಗಳು ತಲೆಯನ್ನೆತ್ತಿ ತಮ್ಮ ಸೇಡನ್ನು ತೀರಿಸದಿರವು. ಬಿಳೇ ಜನರಲ್ಲಿನ್ನೂ ಸ್ವಪ್ರತಿಷ್ಠೆಯ ಆಶೆಯಲ್ಲದೆ ಲೋಕದ ಹಿತವನ್ನು ಸಾಧಿಸುವ ಧ್ಯೇಯಗಳೇನೂ ತೋರಿ ಬರುವುದಿಲ್ಲ ಜಾಗತಿಕ ಶಾಂತಿಗೆ ಅವರ ದುರಾಶೆಗಳೇ ಕಂಟಕವಾಗಿವೆ.

"V"

ರಕ್ತವಿಷಮಯವಾಗುವುದನ್ನು ಮತ್ತು ಕೀವುಗಟ್ಟುವುದನ್ನು ರಕ್ಷಿಸಿಕೊಳ್ಳಿ.

ಸಾಂಬಕ್ ಅತ್ಯುತ್ತಮ ಎಷಹಾರೀ ಚಿಕಿತ್ಸೆ

ಅಲಕ್ಷ್ಯ ಮಾಡಿದ ಹುಣ್ಣು ವಿಷಮಯವಾಗಿ, ದೀರ್ಘಕಾಲದ ನೋವು ಮತ್ತು ಸಂಕಟಗಳನ್ನುಂಟು ಮಾಡಬಹುದು. ನಿಮ್ಮ ಎಲ್ಲಾ ಗಾಯ ಮತ್ತು ಹುಣ್ಣುಗಳ ಮೇಲೆ ಸಕಾಲದಲ್ಲಿ ಸಾಂಬಕ್ ಮುಲಾಂ ಲೇಪಿಸಿ, ಯಾವತ್ತೂ ಬೇನೆಯನ್ನು ನೀಗಿಸಬಹುದು. ಸಾಂಬಕ್‌ನಲ್ಲಿರುವ ಉತ್ತಮ ವನಸ್ಪತಿ ತೈಲಗಳು ನರಗಳ ಮೂಲಕ ಬೇಗನೇ ಒಳಗೆ ಹೀರಲ್ಪಟ್ಟು ನೋವನ್ನು ಶಾಂತಪಡಿಸಿ, ಉರಿಬಾವನ್ನು ತಗ್ಗಿಸಿ ವ್ರಣಗಳಲ್ಲಿದ್ದ ಅಶುಚಿಯನ್ನು ಸ್ವಚ್ಛಗೊಳಿಸಿ, ಗುಣಪಡಿಸುತ್ತದೆ. ಕಲೆಯೊಂದೂ ಉಳಿಯದಂತೆ ಸಾಂಬಕ್ ಗುಣಪಡಿಸುತ್ತದೆ. ಎಲ್ಲಾ ಔಷಧಿ ವ್ಯಾಪಾರಿಗಳು ಸಾಂಬಕ್ ಸಾಬೂನ್, ಸಾಂಬಕ್ ಪೌಡರು ಬಿಕರಿ ಮಾಡುತ್ತಾರೆ.

ಯಾವಾಗಲೂ ಸಾಂಬಕ್ ಉಪಯೋಗಿಸಿ.

ZAM-BUK

ಪ್ರಾಣಿಗಳ ಕೊಬ್ಬಿನ ವಿರಹಿತವಾಗಿದೆ.

Wanted

Wanted Agents to c s orders in every town for N s Indian Ink (drawing ink), F ... Pen Holders, Knives, Ri ons, Snuff Boxes, Ink, Ink Pads, Letter Pads, Hair Oils, Buttons, Tooth Powder, etc. etc.

For particulars apply to:—

KERKERA SONS &Co.,
Maidan West Road,
MANGALORE.

(೨ನೇ ಪುಟದಿಂದ)

ಕಿತ್ತು, ಕಳಚಿ ಬಿಸಾಡಲಿಕ್ಕೂ; ಅಲ್ಲದೆ—ನಂಬ್ರ ಒಂದನೇ ಪಾರ್ಟಿ ನಾಯಕನನ್ನು ಶುಭ ಮುಹೂರ್ತದಲ್ಲಿ ಪ್ರತಿಷ್ಠೆ ಮಾಡಿ ಚಪ್ಪಾಳೆ ಹೊಡೆಯಲಿಕ್ಕೂ; ಮತ್ತೆ ಕೆಲವರು ತಿಳಿದಂತೆ ಅವನ ಕಡಿವಾಣ (ಪಾರ್ಟಿ) ಕೈ ತಪ್ಪಿತೆಂದರೆ, ಅವನನ್ನೋಡಿಸಿ ಈ ಮಂಧರೆ ಸಂಗ್ಲಿತದ ಮೇಳಕ್ಕೆ ತಕ್ಕಂತೆ "ಥಕ ಥೈ" ಮಾಡಬಲ್ಲ ಯಾವನೋ ಇನ್ನೊಬ್ಬ ನಂಬ್ರ ೨ನೇಯವನನ್ನು —ಅವನು ತನ್ನ ತಲೆಯಲ್ಲಿ ಒಣ ಹುಲ್ಲು ತುರುಕಿಸಿಕೊಂಡಅನಾಮಧೇಯನಾದರೂ ಸರಿಯೇ—ಆರಿಸುವ "ಶಾಸ್ತ್ರ" ಮಾಡಿ, ಬಳಿಕ ಅವನಿಗೆ ಪಟ್ಟಾಭಿಷೇಕ ಮಹೋತ್ಸವದ "ಸರ್ಕಸ್" ಜರಗಿಸಲಿಕ್ಕೂ ಬಹಳ ಹೆಚ್ಚಿನ ಶ್ರಮವನ್ನು, ಗುಟ್ಟಾಗಿಯೂ, ಬಹಿರಂಗವಾಗಿಯೂ, ಹಗಲೂ ರಾತ್ರಿಯೂ ನಿರ್ವಹಿಸುತ್ತಿರುವುದರಿಂದ, —ಇವರಿಗೆ ಸೈಶಲ್ ಆಗಿಯೇ ವರ್ಷಕ್ಕೆ ಆರು ತಿಂಗಳ ಸಂಬಳದಷ್ಟು ಬೋನಸ್ಸನ್ನು ಖಜಾನೆಯಿಂದ ಕೊಡಿಸುವುದು ನ್ಯಾಯವಲ್ಲವೇ?

ಹೇಗೂ ಈ ಕೆಲವು ಯಮ....ಏಗಳ ಆ "ಚಕ್ರಭೀಮ" ಕೋಟಿಯ ಕಾರ್ಖಾನೆಯೊಳಗೆ, "ಅವಿಶ್ವಾಸದ ಠರಾವು" ಎಂಬ ಆ "ಹಿಟ್ಲರಿನ ಅಟಂ ಬಾಂಬು" ಒಲೆಯಲ್ಲಿ ಬೇಯುತ್ತಿದ್ದಾಗ; —ಅದನ್ನು ಪ್ರಕಾಶಮರ ಮೇಲೆ ಹಾಕಬೇಕೋ ಬೇಡವೋ ಎಂದು "ಜನಮತ ಸಂಗ್ರಹ"ಕ್ಕೆ ಯಾ "ಮತದಾರರ ಅಭಿಪ್ರಾಯ ಸಂಗ್ರಹ"ಕ್ಕಾಗಿ ಈ ಎಲ್ಲ ಯಮ....ಏಗಳೂ ಹೊರಡದಿದ್ದುದು ದೊಡ್ಡ ಉಪಕಾರವೇ ತಾನೇ?

ಅವರು ಪಾಪ, ಹಾಗೆ ಮಾಡಿದ್ದೇ ನ್ಯಾಯ—ಕಾರಣ, ಇವರಲ್ಲಿ ಹಲವು ಯಂ....ಏಗಳನ್ನು, ಮತದಾರರು ಯಾರೂ ನೇರವಾಗಿ ಚುನಾವಣೆ ಮಾಡಿದ್ದೇ ಇಲ್ಲ, ಸ್ವಾಮಿ! ಇವರಲ್ಲಿ ಹಲವರಿಗೂ—ಚುನಾವಣೆ ಸ್ಕೋಡ್ತಿಯಲ್ಲಿ, ಕಾಂಗ್ರೆಸಿನ ಹೆಸರಿನಿಂದಲೇ, ಇವರ ಚೀಟು ಮೇಲೆ ಬಿದ್ದುದು; ಆದ್ದರಿಂದ ಇವರಿಗೂ, ಜನರಿಗೂ, ಮತದಾರರಿಗೂ ಯಾವ ಬಾದರಾಯಣ ಸಂಬಂಧವೂ, ಸಂಪರ್ಕವೂ ಇಲ್ಲ! ಪ್ರತಿಸ್ಪರ್ಧಿ ಇದ್ದಿದ್ದರೆ, ಆಗ ಚುನಾವಣೆ ಮುಗಿಯುವ ವರೆಗೆ ಆದರೂ ಜನರ ಗುರುತು—ಯೋಗ ಕ್ಷೇಮದ ಹಂಗು ಇರುತ್ತಿತ್ತು ಅನ್ನಿ.

ಆದ್ದರಿಂದ ಜನರೂ, ಮತದಾರರೂ ಅಧಿಕ ಪ್ರಸಂಗದಿಂದ ಈ ಯಮ....ಏಗಳನ್ನು "ಏನು ಮಾಡಿದಿರಿ? ಏನು ಬಿಟ್ಟಿರಿ?" ಎಂದು ವಿಚಾರಿಸುವುದು ಶುದ್ಧ ತಪ್ಪು, ನಾನ್‌ಸೆನ್ಸ್!

ಆದ್ದರಿಂದ ಜನರನ್ನೂ, ಮತದಾರರನ್ನೂ ಸಂಪೂರ್ಣ ಮರೆತು, ತಮ್ಮ ಯಮ....ಏ ಪಾರ್ಟಿಗೆ ಏನಾದರೂ ಕಷ್ಟಕಾಲ, ಗ್ರಹಚಾರ ಕಾಲ ಬಂದಾಗ ಅವರು ತಮ್ಮ "ಕುಲದೇವರಾದ ಹ್ಯಾ ಕಮಾಂಡಿನವರನ್ನೇ" ನೆನವರಿಕೆ ಮಾಡಿಕೊಂಡರೆ ಸರಿ; ಸಾಕು. ಮತ್ತೇನು ಬೇಕು?

ಅಂದರೇನು? ಜನತೆಯ ಸಂಬಂಧವೇ ಇಲ್ಲದ ಈ ಯಂ....ಏಗಳು ಆ ಭೂತಿ ಜನರಿಂದ, ಆ ಸಾಮಾನ್ಯ ಮತದಾರರಿಂದ ಖಾವ "ಹ್ಯಾ—ಲೋ ಕಮಾಂಡ್"ನೂ ಪಡೆಯಬೇಕಾಗಿಲ್ಲ, ಸ್ವಾಮಿ! ಕೇವಲ ಹ್ಯಾ ಕಮಾಂಡಿನವರ ಆ ಒಂದು ವರ ಪ್ರಸಾದ, ಆ ಅನುಗ್ರಹ ದೃಷ್ಟಿ ಇವರ ಬೊಗ್ಗಸೆಗೆ ಬಿದ್ದರಾಯಿತು; ಇವರು ಗೆದ್ದರು!

"ಈ ಯಮ....ಏಗಳು ಇಷ್ಟರ ವರೆಗೆ ಮಾಡಿದ್ದೇನು? ಪಾರ್ಟಿ ಲಡಾಯಿಯೆ? ಫಿತೂರಿಯೆ? ಇದಕ್ಕಾಗಿ ಪ್ರಜೆಗಳ ಬೆವರು ಳಿಸಿದ ತೆರಿಗೆ ಹಣವನ್ನು ಮಹಾ ಎರರಾದ ಅಲಂಕಾರಾಸನದ ಈ ಸದಸ್ಯರಿಗೆ ದಂಡ ಕ್ಕು, ಇವರನ್ನು ಸಾಕುವುದಾದರೂ ಯಾರ ಪ್ರಯೋಜನಕ್ಕೆ?" ಎಂದು ಕೇಟಲೆ ಬುದ್ಧಿಯ ಯಾ ಬುದ್ಧಿ ಇಲ್ಲದ ಹಲವರು ಕೇಳುತ್ತಾರೆ.

ಹಾಗೆ ಈ "ಪುಣ್ಣಿವಂತ"ರ ವಿಷಯದಲ್ಲಿ ಕೇಳುವುದು ಮಹಾ ಪಾಪ—ಸ್ವಾಮಿ! ಬೇಗನೇ "ಶಾಂತಂ ಪಾಪಂ" ಎಂದು ಕಿವಿ ಮುಚ್ಚಿಕೊಳ್ಳಿ; ಅಥವಾ ಯಾರ ಕಿವಿಗಾದರೂ ಆ ಮಾತು ಅಲ್ಲೇ ಬಿದ್ದಿರುವುದಾದರೆ—ಆ ಪಾಪ ಪರಿಹಾರಕ್ಕಾಗಿ ಅಂಥವರು ಆಜೆ ಕೆನ್ನೆಗೊಂದು ಈಜೆ ಕೆನ್ನೆಗೊಂದು ಪೆಟ್ಟನ್ನು ತಾವೇ ಜೆನ್ನಾಗಿ ಎರಿಸಿಕೊಳ್ಳಲಿ! ಅಥವ ಕಾಶಿಗೆ ತೆರಳಿ ಗಂಗೆಯಲ್ಲಿ ಮುಳುಗಿ ಉದ್ದಕ್ಕೆ ತೇಲಿಯಾದರೂ ಹೋಗಲಿ!

——

NOTICE

In the Court of the District Judge of South Kanara

O. P. No. 27/1947.

In the matter of the debts due to T. Gopala Mudya—(deceased.)

1. Mammakke, 2. Balakrishna. 3. Hemavathi, 4. Kamala—Petitioners.

Please take notice that the abovenamed petitioners have applied to the above court praying that a certificate may be granted to the 1st petitioner as Ejamanthi of the branch family of the Petitioners under Part X of the Indian Succession Act 1925 empowering her to collect the debts mentioned in the above petition and the said petition stands posted to 8—4—1947 and if anybody wants to oppose the same he may appear before the court on the said date at 11 A.M. and file his objections.

B. R. Vyasaraya Achar,
Advocate for Petitioners.
Mangalore, 3—3—47.

In the District Court of South Kanara

O, P. No. 26/1947.

In the matter of the assets of the deceased Vincia Soans.

1) Serephina Gojar, 2. Nicodemus Gojar...Petitioners.

Notice— Is hereby given that the above Petitioners have applied to the above court for the grant of a succession certificate to the 1st petitioner in respect of the assets of the deceased Vincia Soans who expired in Balmatta, Mangalore on 29—5—1946.

The above petition stands posted to 3-4-1947 at 10-30 A.M. before the above court. Persons desiring to oppose the same may appear in person or by Vakil and contest the same, otherwise the petition will be decided in their absence.

(By order of the Court)
M Keshava Pai,
Counsel for Petrs.
Mangalore, 12—3—1947.

CALLING ALL YOUNG MEN

There is an unlimited call for Young Men in the field of Life Assurance. There is no job which offers you so much of freedom to develop your personality and individual capacity. You have scope to do a great service to humanity and at the same time enrich yourself morally and materially. A little training will put you in the way of one of the greatest possibilities in Life

Then, why not think seriously of such a Career? The "POPULAR" offers you all facilities and will help you to develop your latent capabilities; and not only that, your qualities and production will be recognised and equitably compensated.

SEND FOR DETAILS IMMEDIATELY.

The Popular Insurance Company, Limited.

MANGALORE.

(Estd: 1929)

ESTD: 1906

CANARA BANK, LIMITED.

(Incorporated in British India with Limited Liability)

(Progress Statement Correct To Thousands Of Rupees)

LIABILITIES

	1945	1946
Capital Subscribed	29,00,000	29,00,000
Capital paid up	28,43,000	28,80,000
Reserve	11,00,000	11,00,000
Deposits	3,50,43,000	4,60,40,000
Due to Bankers	26,91,000	69,57,000
Call Deposits from Bankers	8,00,000	15,00,000
Branch Adjustments	22,07,000	21,09,000
Bills for collection and foreign bills negotiated	20,56,000	34,23,000
Other Liabilities	77,000	85,000
Profit for the year	3,61,000	4,19,000
Rs.	4,71,78,000	6,45,13,000

ASSETS

	1945	1946
Cash	1,01,91,000	1,16,16,000
Govt Securities	1,80,45,000	2,75,61,000
Advances to customers	1,56,87,000	2,01,38,000
Bills for collection and Foreign Bills negotiated	20,56,000	34,23,000
Landed Properties	28,000	5,000
Bank Premises and Furniture and Fixtures	1,46,000	1,47,000
Other Assets	10,25,000	16,23,000
Rs.	4,71,78,000	6,45,13,000

Phone No. 95] **ಜಯಾ ಕೆಫೆ** [ಫೋನು ನಂಬ್ರ ೯೫

(ರಿಜಿಸ್ಟರ್ಡ್)

ಬ್ರಾಹ್ಮಣರ ಶ್ರೇಷ್ಠ ತರಗತಿಯ
ಬೋರ್ಡಿಂಗ್-ಲಾಜಿಂಗ್
ಹಂಪನಕಟ್ಟೆ, ಮಂಗಳೂರು.

ಶುದ್ಧ ತುಪ್ಪದ ಬಗೆ ಬಗೆಯ ಸಿಹಿ ತಿಂಡಿಗಳು ಸರ್ವದಾ ಸಿದ್ಧವಿದೆ.

ನಮ್ಮ ಕೊಟ್ಟಡಿಗಳು

ಆಧುನಿಕ ಸರ್ವಾಸುಕೂಲತೆಗಳಿಂದ ಸುಸಜ್ಜಿತವಾಗಿವೆ.

ಸಂದರ್ಶಕರ ಸೇವೆ, ಮೇಲ್ವಿಚಾರ, ಅವರ ತೃಪ್ತಿಗಳೇ ಸಂಸ್ಥೆಯ ಪ್ರಾಮುಖ್ಯ ಧ್ಯೇಯ

ಎನ್. ವಿ. ಭಟ್,
ಪ್ರೊಪ್ರೈಟರ್.

ಪೋಸ್ಟ್ ಆಫೀಸ್:
ಕೊಯಮುತ್ತೂರು.

THE BANK OF MANGALORE, LTD.

(Incorporated in British India with Limited Liability.)

Season Deposits

Are now accepted at all Branches at the following rates.

3 months .... 3 % per annum.
6 months .... 3½% per annum.

For conditions and further particulars please apply or call at the nearest branch.

BRANCHES:-Bunder, Car Street—Mangalore, Moodabidri, Padubidri, Badiadka—Perdala, Vittal, Uppinangady & Moolky.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

1908ರಲ್ಲಿ ಸ್ಥಾಪಿಸಲ್ಪಟ್ಟುದು

ಶಾಂತಿ ಮತ್ತು ಭದ್ರತೆ

ಯುರೋಪಿನ ಪೀಡಿಸಲ್ಪಟ್ಟ ಜನಾಂಗಗಳಿಗಾಗಿ ಸ್ವಾತಂತ್ರ್ಯವನ್ನು ಗಳಿಸಿ ಕೊಂಡಿದ್ದ ಆ ಪ್ರಚಂಡ ಯುದ್ಧ ಮುಗಿಯಿತು ಆ ನಾಲ್ಕು ಸ್ವಾತಂತ್ರ್ಯಗಳನ್ನು ಸಂಪಾದಿಸಿ ಕೊಡಲು ಹಲವಾರು ಯತ್ನಗಳಾದರೂ ನಾವು ಅದರ ಸುಳಿವಾಪದಲ್ಲೆಲ್ಲಿಯೂ ಇದ್ದಂತೆ ತೋರುವುದಿಲ್ಲ. ನಾವು ಏಮೆಯ ಸೇವೆಯನ್ನು ಬಯಸುವವರೆಲ್ಲರಲ್ಲಿಯೂ ಆ ಸೇವಾ ಕ್ರಮವನ್ನು ಹರಡಿಸುವ ಮೂಲಕ, ಯುದ್ಧ ಕಾಲದಲ್ಲಿಯೂ ಶಾಂತಿ ಸಮಯದಲ್ಲಿಯೂ ಈ ವೈಯಕ್ತಿಕ ವಾಸ್ತವಿಕ ಸ್ವಾತಂತ್ರ್ಯಸಿದ್ಧಿ ಕಾರ್ಯದಲ್ಲಿ ನಮ್ಮ ನಮ್ರ ರೀತಿಯಲ್ಲಿ ಸಹಾಯ ಮಾಡುತ್ತಿದ್ದೇವೆ.

1945ರಲ್ಲಿ ಪೂರ್ಣವಾದ ವ್ಯವಹಾರ } ಕಂಪೆನಿಯದು: **2¾** ಕೋಟಿಗೂ ಮಿಕ್ಕಿ ನಮ್ಮದು: ಸುಮಾರು **50** ಲಕ್ಷ

ಕೊಚ್ಚಿಕಾರ ಸಹೋದರರು ಲಿಮಿಟೆಡ್,

(1910ರಲ್ಲಿ ಸ್ಥಾಪಿಸಲ್ಪಟ್ಟದ್ದು)

ದಕ್ಷಿಣ ಹಿಂದೂಸ್ಥಾನದ ಪ್ರಮುಖ ಏಜೆಂಟರು ಬೊಂಬಯಿ ನಗರ ಮತ್ತು ಅದರ ಸುತ್ತು ಮುತ್ತಲಿನ ಪ್ರದೇಶಗಳಿಗೆ ಸ್ಪೆಶಲ್ ಏಜೆಂಟರು.

"ಬೊಂಬಯಿ ಲ್ಯಾಫ್ ಬಿಲ್ಡಿಂಗ್ಸ್"
ಗಾಂಧಿ ನಗರ, ಉಡುಪಿ.

ಆಫೀಸುಗಳು ಇರುವ ನಗರಗಳು:—
ಬೊಂಬಯಿ, ಬೆಂಗಳೂರು, ಕಲ್ಲಿಕೋಟೆ, ಮಧುರೆ,
ಮಂಗಳೂರು, ಮದ್ರಾಸು, ಮತ್ತು ತ್ರಿವೆಂಡ್ರಮ್.

ದಕ್ಷಿಣ ಭಾರತದಲ್ಲೆಲ್ಲ ಏಜೆನ್ಸಿಗಳಿವೆ.

ಶಾಸ್ತ್ರೀಯ ಅಮೂಲ್ಯ ಔಷಧಗಳು

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡು ಹಿಡಿಯಲ್ಪಟ್ಟುದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕ ಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನಿಯುವುದು. 8 ಔನ್ಸಿನ ಬಾಟ್ಲಿಗೆ ರೂಪ್ಯಾ 2—4—0. ಅಂಚೆವೆಚ್ಚ ಬೇರೆ.

ಜೈವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು ಒಕ್ಕೆ ರೂ. 4—0—0. ಅಂಚೆವೆಚ್ಚ ಬೇರೆ.

ಕಸ್ತೂರಿ ಮಿಶ್ರಣ! ದಶಮೂಲ ಸುಖಪ್ರದ ಔಷಧಿ.

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯ

ಗಳಾಗಿವೆ. ಶೋಧನ ಗುಣದಿಂದ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಅಂಕುಚಿತಮಾಡುವುದು.

ರಸಾಯನ ಗುಣದಿಂದ ಬಾಣಂತಿಯು – ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು. ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ ರೂ. 2—0—0 ಪೋಸ್ಟೇಜು ಪ್ರತ್ಯೇರೆ ಬೇರೆ.

ವಿ. ಸೂ. ಮೇಲಿನ ಕ್ರಯವು ಬಜಾರ ಧಾರಣೆಗೆ ಅನುಸರಿಸಿ ಇರುತ್ತದೆ.

ಶ್ರೀ ಪಿ. ಮಹಾಬಲ ಹೆಬ್ಬಾರ್,
ತೀರ್ಥಹಳ್ಳಿ, ಇವರನ್ನು ಮೈಸೂರು ಸಂಸ್ಥಾನದ ನಮ್ಮ ಏಜೆಂಟರನ್ನಾಗಿ ನೇಮಕಮಾಡಿಯದೆ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು, ದ. ಕನ್ನಡ.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಅಮೃತಾಂಜನ, ಲಿಮಿಟೆಡ್

ಬೊಂಬಾಯಿ—ಮದ್ರಾಸ್—ಕಲ್ಕತ್ತಾ
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆವುದು.

ಯೋಗ್ಯ ದರದಲ್ಲಿ ಉತ್ತಮ ದೇವಪೂಜಾ ಸಾಮಗ್ರಿ

ಅಪೇಕ್ಷಿಸುವವರು ಇಂದೇ ನಮ್ಮ ಪಾತ್ರೆಗೊಂದು ಪತ್ರ ಬರೆಯಿರಿ.

ಸಚಿತ್ರ ಕ್ಯಾಟಲಾಗ್ ಪುಕಟೆ

ಕಳುಹಿಸಿಕೊಡುವೆವು. ಹಿತ್ತಾಳೆ ಉಪಕರಣಗಳು ಬೇಕಾದ ಸೈಜಿನಲ್ಲಿ ಖಾತ್ರಿಯಾಗಿ ಸದಾ ಸಿದ್ಧವಿರುವುದು. ಅಲ್ಲದೆ, ಉಡುಪಿಯಲ್ಲಿ ತಯಾರಾಗುವ ಬೆಳ್ಳಿ ಸಾಮಾನುಗಳನ್ನು ಶುದ್ಧ ಬೆಳ್ಳಿಯಿಂದ ತಯಾರಿಸಿ ಕಳುಹಿಸಬಲ್ಲೆವು. ಗಿರಾಕಿಗಳಿಗೆ ತುಂಬಾ ಅನುಕೂಲ ಹೆಚ್ಚಿನ ಮಾಹಿತಿ ಕ್ಯಾಟಲಾಗಿನೊಂದಿಗೆ.

ಕಲ್ಮಂಜೆ ವ್ಯಾಸಾಚಾರ್ಯ,
ಪಾತ್ರೆ ವ್ಯಾಪಾರಿ, ಉಡುಪಿ, ದ. ಕ.

Kalmanje Vyasacharya
Brass-ware Merchant,
UDIPI, S. I.

THE
Pie-Money Bank, Ltd.,

Maidan Road, MANGALORE.

Undertakes all kinds of Banking Business. Current account at 1% per annum. Savings Bank Deposits at 4% per annum.

FIXED DEPOSITS.

For 2 years 4½% 1 year 4%
For 6 months 3½% 3 months 3%

Auction Chit Funds ranging from Rs. 100—5000 run regularly on systematic lines.

Unique Banking facilities to Businessmen and interested Public.

Apply for particulars:—

K. R. Guru,
Managing Director.

ವೆಂಕಟಗಿರಿ ಮಹಾತ್ಮೆ

ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ಕಾರ್ಯಗಳು ವಾಚಕರಿಗೆ ಮನಃಖುಚಿತವಾಗುವಂತೆ ಗೇಜ್ ಕಾಗದದಲ್ಲಿ ೧೪ ಹಾಫ್‌ಟೋನ್ ಬ್ಲಾಕುಗಳಿಂದ ಕೂಡಿದೆ. ೫೯೪ ಪದ್ಯಗಳಿರುವ ೧೫ ಅಧ್ಯಾಯಗಳು ದಪ್ಪವಾದ ಕಾಗದ. ಮುದ್ದಾದ ಮುದ್ರಣ.

ಬೆಲೆ ರೂಪ್ಯಾ ೧-೮-೦ ಟಪ್ಪಾಲು ಹಾಸಲಾ ಬೇರೆ.

ಸಂಸ್ಕೃತ

ಕವಿ ಎಂಡ್ ಸನ್ಸ್, ಮಂಗಳೂರು, ದ. ಕ.

JAYA LAXMI BANK, LTD.,

ESTD, 1923.

HEAD OFFICE: MANGALORE.

Branches:—Mangalore, Puttur, Manjeswar Kasaragod, & K[illegible]la (South Kanara.) Chikmagalur&Mudigere (Mysore Stat[illegible]ions Cannanore, Kundotty & Malappuram (Malabar)

We offer the best facilities to businessmen. Please make you arrangements with us for the next business season immediately and we assure you that you will have taken the right step. All further particulars could be had from:

M. **Narain Shanker,**
MANAGER,
HEAD OFFICE.

Printed and Published by M. Babu[illegible]a Prabhu, B. A., at the Mangalore Press, Car-Street, Mangalore. Editor: Hurli Bhima Rao.